39th Year of Publication. Phone: 3728.

ವಾರ್ಷಿಕ ಚಂದಾ
ಸ್ಥಳೀಯರಿಗೆ—
ರೂ. 6—00.
ಪರಸ್ಥಳೀಯರಿಗೆ—
(ಟಪ್ಪಾಲು ಖರ್ಚು ಕೂಡಿ)
ರೂ. 8—50.

ಪ್ರಭಾತ


ಬೆಲೆ
12
ಪೈಸೆ.

ಸಂಪುಟ: ೩೯. ಸಂಚಿಕೆ: ೧೨. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 29-4-1973 | VOL. 39. No. 12.



ಸ್ಥಾಪಕ:
ದಿ| ನರಸಿಂಹ ಮರ್ತ ಭಂಡಾರಿಯವರು.

ಐವತ್ತು ವರ್ಷಗಳ ಮೌನಸೇವೆ ಸಲಿಸಿದ ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ, ಮಂಗಳೂರು



ಔಷಧ ತಯಾರಕರಾಗಿ 47 ವರ್ಷಗಳ ಸೇವೆಸಲಿಸಿದ ಶ್ರೀ ಪೊಳ್ತೇಲು ನರಸಿಂಹ ಪೈಯವರು.

ಒಂದು ಕಾಲದಲ್ಲಿ ನಮ್ಮ ದೇವಾಲಯಗಳು ಶಿಕ್ಷಣಕೊಡುವ, ಮಾನಸಿಕ ಹಾಗೂ ದೈಹಿಕ ಚಿಕಿತ್ಸಾಸೇವೆಮಾಡುವ ಕೇಂದ್ರಗಳಾಗಿದ್ದುವು. ಮುಂದೆ "ಸೇವೆ"ಗಳೆಂಬುವು ಆರತಿಯೆತ್ತುವ ಪೂಜೆ ಮತ್ತು ಉತ್ಸವಗಳಿಗೂ ಸಮಾರಾಧನೆಗಳಿಗೂ ಮಿತಗೊಂಡುವು. ಜನತಾಸೇವೆಯೆಂಬ ಪ್ರಾಮುಖ್ಯ ಕಾರ್ಯಾಂಗವು ಶಿಥಿಲಗೊಳ್ಳುತ್ತಿದ್ದಂತೆ ಹಲವು ದೇವಾಲಯಗಳು ಕೇವಲ ಆದಾಯದ ಕಡೆಗೇ ಲಕ್ಷ್ಯವೀವ ವ್ಯಾಪಾರೀ ಸಂಸ್ಥೆಗಳ ಪಾತ್ರವಹಿಸುವಂತಾಯಿತು!

ಇಂತಹ ಪತನದ ಕಾಲದಲ್ಲಿ, ಕಳೆದ ಶತಮಾನದ ಉತ್ತರಾರ್ಧದಲ್ಲಿ ಬಂಗಾಳದಲ್ಲಿ ಭಗವಾನ್ ರಾಮಕೃಷ್ಣರು ಅವತರಿಸಿದರು. ಅವರ "ದೀನ ಪತಿತರಿಗೆ ಬೋಧನೆಮಾಡಲು ನಮಗೆಲ್ಲಿಯ ಅಧಿಕಾರ? ಅಂಥ ಅಹಂಭಾವವಿಲ್ಲದೆ, ಹೋಗಿ ಅವರ ಸೇವೆಮಾಡು!"—ಎಂಬೀ ನುಡಿಗಳಿಂದ ಪ್ರಭಾವಿತರಾದ ಸ್ವಾಮಿ ವಿವೇಕಾನಂದರು, ತನ್ನ ಮೋಕ್ಷಸಾಧನೆಯೊಂದೇ ಸನ್ಯಾಸಿಯ ಗುರಿಯಲ್ಲ, ದೇಶಸೇವೆ-ಲೋಕಸೇವೆಗಳೇ ಮುಖ್ಯ ಎಂಬುದನ್ನು ಕಂಡುಕೊಂಡರು. ಜನತಾ ಜನಾರ್ಧನನ ಸೇವೆಯ ಸಂದೇಶವನ್ನು ಜಗತ್ತಿಗೊಯ್ದರು. ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಹದಿನೈದು ನಿಮಿಷಗಳ ಭಾಷಣದಿಂದ ಜಗದ್ವಿಖ್ಯಾತಿ ಪಡೆದ ಈ ಲೋಕನಾಯಕನು ತನ್ನ ನಿರ್ವಾಣದ ತನಕ ಅವಿಶ್ರಾಂತವಾಗಿ ದುಡಿದು ಸ್ಥಾಪಿಸಿದ ಮಹಾಸಂಸ್ಥೆಯೇ ಶ್ರೀ ರಾಮಕೃಷ್ಣ ಮಿಶನ್. ಈ ಮಹಾ ಸಂಸ್ಥೆಯಿಂದ ಸ್ಫೂರ್ತಿಪಡೆದವರು ಅಸಂಖ್ಯಾಕ ಮಂದಿ.

ಇದೇ ತಾ. 22ನೇ ರವಿವಾರ ತನ್ನ ಸ್ವರ್ಣೋತ್ಸವವನ್ನಾಚರಿಸಿದ ಶ್ರೀ ರಾಮಕೃಷ್ಣ ವೈದ್ಯಾಶ್ರಮ ಸಂಘವೂ ಇಂಥ ಸೇವಾಸಂಸ್ಥೆಗಳಲ್ಲಿ ಒಂದಾಗಿದೆ.

ಐವತ್ತು ವರ್ಷಗಳ ಹಿಂದೆ, ಮಂಗಳೂರಿನಲ್ಲಿ ಹೆಸರಾಂತ ವ್ಯಾಪಾರಿಗಳಾಗಿದ್ದ ದಿ| ನರಸಿಂಹ ಮರ್ತ ಭಂಡಾರಿಗಳವರು, ದುರ್ಬಲರ ಸೇವೆಗಾಗಿ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಈ ಧರ್ಮವೈದ್ಯಾಶ್ರಮವನ್ನು ಆರಂಭಿಸುವ ಪ್ರೇರಣೆಹೊಂದಿದರು. ಕರಂಗಲಪಾಡಿಯಲ್ಲಿರುವ ತಮ್ಮ ಮನೆಯಿಂದ ಅನತಿ ದೂರದಲ್ಲಿ, ಒಂದು ಚಿಕ್ಕ ಕೊಠಡಿಯಲ್ಲಿ ಇದನ್ನು ತೆರೆದು, ದಿನಕ್ಕೆ ಮೂವತ್ತು ಮಂದಿಗಾದರೂ ಧರ್ಮಾರ್ಥ ಚಿಕಿತ್ಸಾಸೇವೆ ಸಲ್ಲಬೇಕೆಂದು ಇಚ್ಛಿಸಿ, ಚಿಕಿತ್ಸಾಲಯವನ್ನು ನಡೆಸಲು ತಾವೊಬ್ಬರೇ ಪ್ರತಿ ತಿಂಗಳಿಗೂ ನೂರು ರೂಪಾಯಿಯಂತೆ ಧನಸಹಾಯಕೊಡುತ್ತ ಬಂದರು. ಅಂದಿನ ರೂಪಾಯಿಯ ಮೌಲ್ಯವನ್ನು ಇಂದು ಹದಿನೈದು ಪಾಲು ಹೆಚ್ಚಿಗೆಯೆಂದು ಗಣಿಸಿದರೆ—ಶ್ರೀ ನರಸಿಂಹ ಮರ್ತ ಭಂಡಾರಿಯವರು ಅಂದು ಕೊಡುತ್ತಿದ್ದ ಸಹಾಯಧನವು ಇಂದು ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿಯಷ್ಟಾಗುವುದು. ಶ್ರೀ ಭಂಡಾರಿಯವರು ತಮ್ಮ ವರ್ಚಸ್ಸು ಬೀರಿ ಇತರರಿಂದ ಧನಸಂಗ್ರಹ ಮಾಡಿ ಈ ವೈದ್ಯಾಶ್ರಮ ನಡೆಸಿ ತಾವು ಹೆಸರು ಪಡೆಯಲಿಚ್ಛಿಸಲಿಲ್ಲ. ತಾವೇ ತೆತ್ತರು, ಮಾತ್ರವಲ್ಲ, ವೈದ್ಯಾಶ್ರಮಕ್ಕೆ ಅವಶ್ಯವಿರುವ ಶಾಸ್ತ್ರಸಿದ್ಧ ಔಷಧಿಗಳ ತಯಾರಿಗೆ ಸ್ಥಳವನ್ನು ತಮ್ಮ ಮನೆಯ ಸ್ಥಳದಲ್ಲೇ ಧರ್ಮಾರ್ಥವಾಗಿ ಕೊಟ್ಟರು. ಆ ಕಾಲದಲ್ಲೂ ನಗರದಲ್ಲಿ 2—3 ಕನ್ನಡ ವಾರಪತ್ರಿಕೆಗಳಿದ್ದರೂ ಶ್ರೀ ನರಸಿಂಹ ಮರ್ತ ಭಂಡಾರಿಗಳವರಾಗಲಿ, ಮುಂದೆ ಅವರ ಈ ಸಂಸ್ಥೆಯಲ್ಲಿ ಸೇವಾಕಾಂಕ್ಷಿಗಳಾಗಿ ಬಂದು ಸಹಕರಿಸಿದವರಾಗಲೀ ತಮ್ಮ ಸೇವೆಗೆ ಪ್ರಸಿದ್ಧಿಯನ್ನೇ ಬಯಸಲಿಲ್ಲ.

ನಮ್ಮ ನಗರದ ಆಢ್ಯರಲ್ಲಿ ದಿ| ಮಡೇರಬೆಟ್ಟು ಶ್ರೀನಿವಾಸ ಕಾಮತ್, ದಿ| ನೆಲ್ಲಿಕಾಯಿ ವೆಂಕಟರಾವ್, ದಿ| ಮಿಜಾರು ಕೃಷ್ಣ ಅಣ್ಣಪ್ಪ ಪೈ, ದಿ

(8ನೇ ಪುಟಕ್ಕೆ ಮುಂದುವರಿದಿದೆ)



ಸೇವೆಯ ಆರನೇ ದಶಕದಲ್ಲಿ—ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ.

ಪ್ರಪಂಚದ ಒಂದು ಸುತ್ತು

ಡಿಪ್ಲೊಮಾ ಮಾರಾಟ

ವಿಶ್ವವಿದ್ಯಾಲಯದ ಹೊಸ್ತಿಲನ್ನು ಮೆಟ್ಟದೇ ಇರುವ 100,000 ಅಮೇರಿಕನ್ನರು ಪ್ರತಿವರ್ಷವೂ ಪದವೀಧರರೆನಿಸಿಕೊಂಡು ಡಿಪ್ಲೊಮಾಗಳನ್ನು ಪಡೆಯುತ್ತಾರೆ ಎಂದು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯು ವರದಿ ಮಾಡಿದೆ. ಡಿಪ್ಲೊಮಾಗಳ ಮೇಲೆ ಕಳ್ಳ ಸಹಿಹಾಕಿ ಒದಗಿಸುವ ಕಾರ್ಯದಲ್ಲಿ ಸುಮಾರು 60 ಅಜ್ಞಾತ 'ವಿಶ್ವವಿದ್ಯಾಲಯ'ಗಳು ತೊಡಗಿವೆ. ಬೆಲೆ 25ರಿಂದ 25,000 ಡಾಲರುಗಳ ವರೆಗೆ. ಈ 'ವಿಶ್ವವಿದ್ಯಾಲಯ'ಗಳು ಬಹಿರಂಗವಾಗಿಯೇ ಜಾಹೀರಾತುಗಳನ್ನು ನೀಡುತ್ತವೆ. ಅವು ನೀಡುವ ಸರ್ಟಿಫಿಕೇಟ್‌ಗಳು ನಿಜವಾದುವಾಗಿಯೇ ತೋರುತ್ತವೆ. ವ್ಯತ್ಯಾಸ ಸ್ವಲ್ಪವೂ ಇರುವುದಿಲ್ಲ. ಇದುವರೆಗೆ ಇಂಥ ಕಳ್ಳ 'ವಿಶ್ವವಿದ್ಯಾಲಯ'ಗಳನ್ನು ಆಡಳಿತೆಗೆ ಪತ್ತೆಮಾಡಲು ಸಾಧ್ಯವಾಗಿಲ್ಲ!

o o o o

ಎಳೆಯರಾಗಿರುವಾಗಲೇ ಪ್ರಾರಂಭ

ಪಶ್ಚಿಮ ಜರ್ಮನಿಯ ನ್ಯೂರೆಂಬರ್ಗ್‌ನ ಬಡಾವಣೆಯ ನಿವಾಸಿಗಳನ್ನು ಮೂರು ವರ್ಷಗಳಿಂದ 23 ಜನರ ತಂಡವೊಂದು ಬೆದರಿಕೆಯಲ್ಲಿರಿಸಿತ್ತು. ಈ ತಂಡದಲ್ಲಿ ಎಂಟು ಮಂದಿ 11ರಿಂದ 14 ವಯಸ್ಸಿನವರು, ಉಳಿದವರು 15ರಿಂದ 19 ವಯಸ್ಸಿನವರು. ತಂಡದ ನಾಯಕನ ವಯಸ್ಸು 15 ಮಾತ್ರ. ಪೋಲೀಸರು ನಡೆಸಿದ ತನಿಖೆಯ ಪ್ರಕಾರ ಈ ತಂಡವು 50ಕ್ಕೂ ಹೆಚ್ಚು ದರೋಡೆಗಳನ್ನು ನಡೆಸಿದೆ.

o o o o

ಗ್ರೀಸಿನ ಚಲಚ್ಚಿತ್ರ ಮಂದಿರಗಳ ಮುಷ್ಕರ

ಕಳೆದ ಫೆಬ್ರವರಿ 23ರಂದು ಗ್ರೀಸಿನ ಎಲ್ಲ ಚಿತ್ರಮಂದಿರಗಳೂ ಮುಚ್ಚಿದ್ದುವು. ಒಂದು ದಿನದ ಈ ಮುಷ್ಕರಕ್ಕೆ ಚಿತ್ರಮಂದಿರಗಳ ಮಾಲೀಕರು ನೀಡಿರುವ ಕಾರಣ ಟೆಲಿವಿಷನ್ ಪೈಪೋಟಿಯಿಂದ ತಮ್ಮ ವ್ಯಾಪಾರಕ್ಕೆ ಆಗುತ್ತಿರುವ ನಷ್ಟ! "ಸರಕಾರವು ಮನರಂಜನಾ ತೆರಿಗೆ ತಗ್ಗಿಸಬೇಕು, ಸೆನ್ಸಾರ್ ನಿಯಮವನ್ನು ಸಡಿಲಗೊಳಿಸಬೇಕು" ಇದು ಅವರ ಬೇಡಿಕೆ.

o o o o

ಬೊಸ್ಟನ್ ನಗರದ ವಿಸ್ಮಯಕರ ಕಟ್ಟಡ

ಬೋಸ್ಟನ್ ನಗರದಲ್ಲಿ ನಿರ್ಮಿತವಾಗಿರುವ ಅತ್ಯಂತ ಎತ್ತರದ ಕಟ್ಟಡ—60 ಅಂತಸ್ತುಗಳ ಗಗನಚುಂಬಿ—ಇನ್ನೂ ಆರು ತಿಂಗಳಾದರೂ ಖಾಲಿಯಾಗಿ ಬಿದ್ದಿರಬೇಕಾಗಿದೆ. ಸಾಮಾನ್ಯ ವೇಗದಲ್ಲಿ ಗಾಳಿ ಬೀಸಿದಾಗಲೂ ಪೋಲೀಸರು ಕಟ್ಟಡದ ಸುತ್ತ ಪಹರೆ ನಿಲ್ಲಬೇಕಾಗಿದೆ. ಇದಕ್ಕೆ ಕಾರಣ ಕಟ್ಟಡದಲ್ಲಿ 10,000 ದೊಡ್ಡ ಗಾಜಿನ ಕಿಟಿಕಿಗಳಿವೆ. ಗಾಳಿ ಬೀಸಿದಾಗ ಅವು ಉರುಳಿ ಗಾಜಿನ ಚೂರುಗಳು ರಸ್ತೆಗೆ ಬೀಳುತ್ತವೆ. ಈ ವಿಸ್ಮಯವನ್ನು ಕಂಡುಹಿಡಿಯಲು ತಾಂತ್ರಿಕಜ್ಞರು ಪ್ರಯೋಗ ನಡೆಸುತ್ತಿದ್ದಾರೆ. ಬೇರೆ ಗಾಜನ್ನು ಹಾಕುವುದಕ್ಕೆ 8·9 ಮಿಲಿಯ ಡಾಲರುಗಳು ಬೇಕಾಗುತ್ತವೆ. ಇದು ಕಟ್ಟಡನಿರ್ಮಾಣ ವೆಚ್ಚದ ಶೇಕಡಾ 8ರಷ್ಟಾಗುತ್ತದೆ.

o o o o

ಹಿಮಾಲಯದ ಕಲ್ಲು ತುಂಡುಗಳಿಂದ ಧನಸಂಗ್ರಹ

ಪಾಶ್ಚಾತ್ಯ ದೇಶಗಳಲ್ಲಿನ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಗಳು ಸಾಮಾನ್ಯವಾಗಿ ಹಣಸಂಗ್ರಹಿಸಿಕೊಂಡು ತಮ್ಮ ಕೆಲಸ ನಡೆಸುತ್ತವೆ. ಹಣದ ಕೊರತೆ ಯಾವಾಗಲೂ ಇರುತ್ತದೆ. ಪ್ರಪಂಚಪರಿಶೋಧನಾ ಸಂಘವೊಂದು ಕಲ್ಲುಗಳನ್ನು ಮಾರಾಟ ಮಾಡಿ ಹಣಸಂಗ್ರಹಿಸಲು ಯೋಚಿಸಿದೆ. ಎವರೆಸ್ಟ್ ಶಿಖರದಿಂದ ದೊಡ್ಡ 100 ಕಿಲೋಗ್ರಾಮ್ ತೂಕದ ಕಲ್ಲು ತಂದು ಅದನ್ನು ಸಣ್ಣ ತುಂಡುಗಳಾಗಿ ಮಾಡಿ, 40 ಪೌಂಡ್‌ಗೆ ಒಂದು ಚೂರಿನಂತೆ ಮಾರಾಟಮಾಡಲು ಸಂಸ್ಥೆ ನಿರ್ಧರಿಸಿದೆ.

o o o o

'ಪ್ರಶಾಂತ'ವಾದ ಮೇಳವೆಂದರೆ ಇದು!

ರಯೋಡಿ ಜನೈರೋ(ಬ್ರೆಜಿಲ್)ದ ಪೋಲೀಸು ಅಧಿಕಾರಿಗಳಿಗೆ ಪರಂಪರಾನುಗತವಾದ ಮಾರ್ಚ್ ಮೇಳ ಸುಗಮವಾಗಿ ಸಾಗಿದ್ದು ಸಂತೋಷ ಉಂಟುಮಾಡಿದೆ. ಅದು 'ಪ್ರಶಾಂತ'ವಾಗಿ ಜರುಗಿತು ಎಂಬುದು ಅವರ ಅಭಿಪ್ರಾಯ; ನಾಲ್ಕು ದಿನಗಳ ಮೋಜಿನ ಮೇಳದಲ್ಲಿ 'ಕೇವಲ' 137 ಮಂದಿ ಮಡಿದರು ಮತ್ತು ಸುಮಾರು 11,000 ಮಂದಿ ಗಾಯಗೊಂಡು ಆಸ್ಪತ್ರೆಗೆ ಸೇರಿದರು. ಕಳೆದವರ್ಷ ಈ ಸಂಖ್ಯೆಯು ಇನ್ನೂ ಹೆಚ್ಚಾಗಿದ್ದಿತಂತೆ. ರಸ್ತೆ ಅವಘಡಗಳು, ದರೋಡೆ, ಕುಡಿತದ ಅಮಲಿನಲ್ಲಿ ಹೊಡೆದಾಟ—ಇವೇ ಅಪಘಾತಗಳಿಗೆ ಕಾರಣಗಳು!

o o o o

ನಿಕ್ಸನ್ ವಿಜಯೋತ್ಸವದ ವೆಚ್ಚ ಕೇಳಿದಿರಾ?

ಅಧ್ಯಕ್ಷ ನಿಕ್ಸನ್‌ರವರು ಮರುಚುನಾವಣೆಯಲ್ಲಿ ಜಯಿಸಿದ ವಿಜಯೋತ್ಸವವನ್ನು ಆಚರಿಸಲು ಅಮೇರಿಕದ ಇತಿಹಾಸದಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಹಣ ಖರ್ಚಾಯಿತು. ಅದು 4·4 ಮಿಲಿಯ ಡಾಲರುಗಳಾಗಿದ್ದುವು ಎಂದು ಪಶ್ಚಿಮ ಜರ್ಮನಿಯ 'ಸ್ಟರ್ನ್' ನಿಯತಕಾಲಿಕೆಯು ಬರೆದಿದೆ.

o o o o

ದಾಖಲೆಗಳು

ವಿನ್‌ಸ್ಟನ್ ಸಲೋಮ್‌ನ (ಉತ್ತರ ಕರೋಲಿನಾ, ಅಮೇರಿಕ) ಹದಿನೆಂಟು ವಯಸ್ಸಿನ ಗೆರಾಲ್ಡ್ ಪ್ಲೋಟ್ಜ್ ಎರಡು ಗಂಟೆಗಳ ಕಾಲದಲ್ಲಿ 51 ಬೇಯಿಸಿದ ಮೊಟ್ಟೆಗಳನ್ನು ತಿಂದು 124 ಡಾಲರುಗಳನ್ನು ಗಳಿಸಿದನು.

o o o o

ಎಫ್. ಬಿ. ಐ. ವರದಿಗಳಿಗನುಸಾರವಾಗಿ 1971ರ ಜುಲೈನಿಂದ 1972ರ ಜೂನ್ ವರೆಗೆ ಅಮೇರಿಕದ ಸೈನ್ಯದಿಂದ ಪರಾರಿಯಾಗಿದ್ದವರಲ್ಲಿ 21,000 ಮಂದಿಯನ್ನು ಹಿಡಿದು ಬಂಧಿಸಲಾಗಿದೆ, ಪರಾರಿಯಾಗಿರುವವರು ಎಷ್ಟು ಮಂದಿ ಎಂಬುದನ್ನು ಅದು ತಿಳಿಸಿಲ್ಲ.

o o o o

ನಶ್ಯಹಾಕುವುದರಲ್ಲಿ ಚಾಂಪಿಯನ್‌ಶಿಪ್ ಸ್ಪರ್ಧೆ ಪ್ರಥಮಬಾರಿಗೆ ಬ್ರಿಟನ್‌ನಲ್ಲಿ ನಡೆಯಿತು. ಇತ್ತೀಚೆಗೆ ಅಡಿಲಿಂಗ್‌ಟನ್‌ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ 58 ವಯಸ್ಸಿನ ಜಾರ್ಲೋಪ್ ಜಯಗಳಿಸಿದರು. 2ನಿಮಿಷ ಹತ್ತೊಂಭತ್ತು ಸೆಕೆಂಡುಗಳಲ್ಲಿ ಅವರು 75 ಚಿಟಿಕೆ ನಶ್ಯ ಏರಿಸಿದರು. ಅವರಿಗೆ ಒಮ್ಮೆಯೂ ಶೀನಲಿಲ್ಲ.

o o o o

ಡಾಲರಿನ ಬೆಲೆ

ಕರೆನ್ಸಿ ವ್ಯವಹಾರದಲ್ಲಿ ತೊಡಗಿದ್ದ ಸ್ವಿಸ್ ವ್ಯಾಪಾರಿಯೊಬ್ಬನ ಬಳಿಗೆ ಇಬ್ಬರು ಅಮೇರಿಕನ್ನರು ಬಂದರು. 12,500 ಸ್ವಿಸ್ ಫ್ರಾಂಕ್‌ಗಳಿಗೆ 35,000 ಡಾಲರುಗಳನ್ನು ವಿನಿಮಯಮಾಡಿಕೊಳ್ಳಲು ತಾವು ಸಿದ್ಧರೆಂದು ತಿಳಿಸಿದರು. ಸ್ವಿಸ್ ವ್ಯಾಪಾರಿ ಸಂತೋಷದಿಂದ ಒಪ್ಪಿ ಹಾಗೇ ಮಾಡಿದ. ಆದರೆ ಅವರು ನೀಡಿದ ಕಟ್ಟು ಬಿಚ್ಚಿ ನೋಡಿದಾಗ ಹೆಚ್ಚಾಗಿ ಅದರಲ್ಲಿ ಟಾಯ್ಲೆಟ್ ಪೇಪರುಗಳಿದ್ದುವು. ಅತ ಅದನ್ನು ನೋಡಿ, ಅಂಥ ಭಾರೀ ನಷ್ಟವೇನಾಗಲಿಲ್ಲ. ಡಾಲರಿನ ಬೆಲೆ ಟಾಯ್ಲೆಟ್ ಕಾಗದದ ಬೆಲೆಗೆ ಬರುವ ಕಾಲ ದೂರವೇನಿಲ್ಲ ಎಂದ.

o o o o

ವಾಲುತ್ತಿರುವ ಇನ್ನೊಂದು ಗೋಪುರ

ವಿಖ್ಯಾತವಾದ ಬಿಗ್‌ಬೆನ್ ಗಡಿಯಾರ ಹೊಂದಿರುವ ವೆಸ್ಟ್ ಮಿನಿಸ್ಟರ್ ಗೋಪುರವು ಕಾಮನ್ಸ್ ಸಭೆ ಸೇರುವ ಕಟ್ಟಡದ ಕಡೆಗೆ ವಾಲುತ್ತಿದೆ ಎಂದು ಪಶ್ಚಿಮ ಜರ್ಮನಿಯ ಪತ್ರಿಕೆಯೊಂದು ವರದಿಮಾಡಿದೆ. ಅನೇಕ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರು ವೆಸ್ಟ್ ಮಿನಿಸ್ಟರ್ ಅರಮನೆಯ ಅಸ್ತಿಭಾರವನ್ನು ಭದ್ರಗೊಳಿಸಬೇಕು ಎಂದು ಒತ್ತಾಯಪಡಿಸಿದ್ದಾರೆ.

o o o o

ತೆಂಗಿನಮರಗಳೇ ಇಲ್ಲದ "ಪಾಮ್‌ಬೀಚ್"

ಇನ್ನು ಇಪ್ಪತ್ತು ವರ್ಷಗಳಲ್ಲಿ ಪಾಮ್ ಬೀಚ್‌ನಲ್ಲಿರುವ ತೆಂಗಿನಮರಗಳಲ್ಲಿ ಶೇಕಡಾ 80ರಷ್ಟು ಹೋಗಿಬಿಡುವುವು, ಅವಕ್ಕೆ ತಗಲಿರುವ ರೋಗವನ್ನು ನಿವಾರಿಸದಿದ್ದಲ್ಲಿ; ಎಂದು ಅಮೇರಿಕನ್ ವಿಜ್ಞಾನಿಗಳು ಹೇಳಿದ್ದಾರೆ. ("ಪಾಮ್"=ತೆಂಗಿನಮರಗಳು.)

——

ನೇಕಾರರ ದುಸ್ಥಿತಿ

ಸರಕಾರವು ನೂಲಿನ ಪೂರೈಕೆಗೆ ನಿಯಂತ್ರಣ ತಂದ ಪರಿಣಾಮವಾಗಿ ನೇಕಾರರಿಗೆ ಕೆಲಸವಿಲ್ಲದಾಗಿದೆ; ಜಿಲ್ಲೆಯಲ್ಲಿ ಸುಮಾರು 7500 ಮಂದಿ ನೇಕಾರರು ಉಪವಾಸ ಬೀಳುವ ದುಸ್ಥಿತಿ ಉಂಟಾಗಿದೆ ಎಂದು ತಾ. 24ರಂದು ಸಂಜೆ ಉಡುಪಿ ತಾಲೂಕಿನ ಸಾಲಿಕೇರಿ ಗ್ರಾಮದಲ್ಲಿ ನೇಕಾರರ ಸಭೆಯನ್ನುದ್ದೇಶಿಸಿ ಭಾಷಣಮಾಡಿದಾಗ ಜನಸಂಘದ ಧುರೀಣ ಶ್ರೀ| ಜಿ. ರಮೇಶ ಕಾಮತರು ತಿಳಿಸಿದರು.

ಗೊಬ್ಬರ ಕಾರ್ಖಾನೆಗೆ ಯಂತ್ರಸ್ಥಾಪನೆ

ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆಯ ಯಂತ್ರಸ್ಥಾಪನೆಯ ಉದ್ಘಾಟನೆಯು ತಾ. 26ರಂದು ಬೆಳಗ್ಗೆ ದ.ಕ. ಜಿಲ್ಲಾಧಿಕಾರಿ ಶ್ರೀ| ಎಂ. ಬಿ. ಪ್ರಕಾಶರಿಂದ ನಡೆಯಿತು. ಯಂತ್ರಸ್ಥಾಪನೆಯ ಪ್ರಥಮ ಅಂಗವಾಗಿ ಕಾರ್ಖಾನೆಗೆ ಭೂಗತ ಜಲ ಪೂರೈಕೆ ಯೋಜನೆಯ ಪ್ರಥಮ ಪೈಪ್‌ಜೋಡಣೆಯ ಕಾರ್ಯವು ಅಂದು ನೆರವೇರಿತು.

—o—

ಸೋವಿಯತ್ ವಿದ್ವಾಂಸರ ಹಿಂದೀ ಭಾಷಾಧ್ಯಯನ

(ತೋನ್ಸೆ ಸಂಜೀವ ಹೆಗ್ಡೆ)

ಶುದ್ಧಾಂತಕರಣವುಳ್ಳ ಸೋವಿಯತ್ ಭಾರತ ವಿದ್ಯಾವಿದರ ಚೈತನ್ಯಯುತವಾದ ಒಂದು ವೃಂದವು ಭಾರತ ಮತ್ತು ಅದರ ಬಗೆಬಗೆಯ ಸಮಸ್ಯೆಗಳ ಕುರಿತು ನಿರಂತರವಾಗಿ ಕೂಲಂಕಷ ಅಧ್ಯಯನವನ್ನು ನಡೆಸುತ್ತಿದೆ. ಅವರಲ್ಲಿ ಕೆಲವರು ಭಾರತೀಯ ಭಾಷೆಗಳನ್ನೂ, ಅವುಗಳ ಮೂಲ ಮತ್ತು ವಿಕಾಸ ಸಮಸ್ಯೆಗಳನ್ನೂ, ಕಲೆಗಳ ಮತ್ತು ವಿಜ್ಞಾನಗಳ ಕ್ಷೇತ್ರದಲ್ಲಿ ಅಭಿವ್ಯಕ್ತಿ ಸಾಧನವಾಗಲು ಅವುಗಳಲ್ಲಿರುವ ಸಾಮರ್ಥ್ಯವನ್ನೂ ಪರಿಶೀಲಿಸತೊಡಗಿದ್ದಾರೆ. ಭಾರತೀಯರಲ್ಲಿ ಬಹುಸಂಖ್ಯಾತರು ಮಾತನಾಡುವ ಮತ್ತು ತಿಳಿದುಕೊಳ್ಳುವ ಹಿಂದೀ ಭಾಷೆಯು ಸ್ವಾಭಾವಿಕವಾಗಿಯೇ ಅವರ ವಿಶೇಷ ಗಮನವನ್ನು ಸೆಳೆಯಿತು. ಡಾ| ಪ. ಅ. ಬರಾನ್ನಿಕೊವ್ ಅವರು ಬರೆದ "ರಾಷ್ಟ್ರಭಾಷೆಯಾಗಿ ಹಿಂದೀ ಎದುರಿಸುವ ಸಮಸ್ಯೆ" ಎಂಬ ಕೃತಿಯನ್ನು ಇತ್ತೀಚೆಗೆ ಸೋವಿಯತ್ ವಿಜ್ಞಾನ ಅಕಾಡೆಮಿಯು ಪ್ರಕಟಿಸಿದೆ. ಹಿಂದೀ ಭಾಷೆಯ ವಿಶೇಷ ಲಕ್ಷಣಗಳ ಪರಿಚಯ ಮಾಡಿಕೊಡುವ ಸಂಪರ್ಕ ಭಾಷೆಯಾಗಲು ಅದಕ್ಕಿರುವ ಯೋಗ್ಯತೆಯ ಬಗೆಗೂ ಅಂತಃಶಕ್ತಿಯ ಬಗೆಗೂ ನಿರ್ಣಯಕ್ಕೆ ಬರಲು ಸಹಾಯಕವಾಗುವ ವಿಷಯಗಳನ್ನು ಓದುಗರಿಗೆ ಪರಿಚಯಮಾಡಿಕೊಡುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ. ಭಾರತದಲ್ಲಿ ಹಿಂದೀ ಭಾಷೆಯನ್ನು ಕಡ್ಡಾಯವಾದ ರಾಜ್ಯಭಾಷೆಯಾಗಿ ಅಂಗೀಕರಿಸಬೇಕೆ? ಎಂಬ ವಿಷಯದ ಬಗೆಗೆ ಈ ದೇಶದಲ್ಲಿ ನಡೆಯುತ್ತಿರುವ ರಾಜಕೀಯ ವಿವಾದದಿಂದ ದೂರವಿರಲು ಲೇಖಕರು ಮುಂದಾಲೋಚನೆಯ ಪ್ರಯತ್ನಮಾಡಿದ್ದಾರೆ. ಎಲ್ಲ ಭಾರತೀಯ ಭಾಷೆಗಳಲ್ಲಿ ಹಿಂದೀಯನ್ನು ಮಾತ್ರವೇ ಸಂಪರ್ಕ ಭಾಷೆಯಾಗಿ ಅಂಗೀಕರಿಸಬಹುದೆಂಬುದನ್ನೂ, ತರ್ಕಸಮ್ಮತವಾದ ಹಿತಕರದೃಕ್ಪಥದಿಂದ ಅದು ಜಗತ್ತಿನ, ಇತರ ಪ್ರಮುಖ ಭಾಷೆಗಳಿಗೆ ಹೋಲಿಸಬಹುದಾದಂತೆ ಸಮರ್ಥವಾದ ಅಭಿವ್ಯಕ್ತಿಯ ಸಾಧನವಾಗಿ ವಿಕಾಸಗೊಳ್ಳುವುದು ಸಾಧ್ಯವೆಂಬುದನ್ನೂ ತೋರಿಸಿಕೊಡಲು ಅವರು ಪ್ರಯತ್ನಮಾಡಿದ್ದಾರೆ.

ಈ ಕೃತಿಯು ಡಾ| ಬರಾನ್ನಿಕೊವ್ ಅವರ ವಿಶೇಷ ಪಾಂಡಿತ್ಯವನ್ನೂ, ವಿಶೇಷವಾಗಿ ಹಿಂದೀ ಭಾಷೆಯ ಬಗೆಗೆ ಅವರು ಮಾಡಿರುವ ಆಳವಾದ ಪರಿಶ್ರಮಪೂರ್ಣವಾದ ಅಧ್ಯಯನವನ್ನೂ ವ್ಯಕ್ತಪಡಿಸುತ್ತದೆ. ಹಿಂದೀ ಭಾಷೆಯ ಪ್ರಚಲಿತ ರೂಪ ಮತ್ತು ಪ್ರವೃತ್ತಿಗಳ ಪರಿಚಯವು ಅವರಿಗೆ ಇದೆ. ಅದರ ಮೂಲವನ್ನೂ ಮತ್ತು ವಿಕಾಸ ಮಾರ್ಗಗಳನ್ನೂ ಸಹ ಅವರು ಪರಿಶೀಲಿಸಿದ್ದಾರೆ. ಅಷ್ಟೇ ಶ್ರದ್ಧೆಯಿಂದ ಅವರು ಉರ್ದೂ ಭಾಷೆಯ ಅಧ್ಯಯನವನ್ನೂ ಸಹ ಮಾಡಿದ್ದಾರೆ. ಅದರಿಂದ ಅವರು ಈ ಭಾಷೆಗಳ ಹೋಲಿಕೆಗಳ ಬಗೆಗೂ ಮತ್ತು ವೈರುಧ್ಯಗಳ ಬಗೆಗೂ ಅಭಿಪ್ರಾಯ ನೀಡಬಲ್ಲರು. ಉತ್ತರ ಭಾರತದಲ್ಲಿ ಹಿಂದೀ ಮತ್ತು ಉರ್ದೂ ಭಾಷೆಗಳು ಮೊದಲು ಮುಸ್ಲಿಂ ದೊರೆಗಳ ಆಡಳಿತದಲ್ಲೂ, ಆ ಮೇಲೆ ಬ್ರಿಟಿಷರ ಆಡಳಿತದಲ್ಲೂ ಅವಳಿ ಭಾಷೆಗಳಾಗಿ ವಿಕಾಸಗೊಂಡು ಭಾರತದ ಇತಿಹಾಸದಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಅವಿಚ್ಛಿನ್ನ ಸಂಪರ್ಕವನ್ನು ಬೆಳೆಸಿಕೊಂಡು ಬಂದಿವೆಯೆಂಬುದನ್ನು ಅವರು ಮನಗಂಡಿದ್ದಾರೆ.

ಉತ್ತರಭಾರತದಲ್ಲಿ ಜನರು ಮಾತನಾಡುವ ವ್ರಜಭಾಷಾ, ಹರಿಯಾನೀ, ಕನೌಜಿ, ಬುಂದೇಲಿ ಅವಧೀ, ಬಾಘೇಲಿ, ಛತ್ತೀಸ್ ಗಢಿ, ಭೋಜಪುರೀ, ಮಾಗಧೀ, ಮೈಥಿಲೀ, ಮಾರ್ವಾರೀ, ಮಾಲ್ವೀ, ಮೇವಾತೀ, ಕುಮಾಯೂನೀ, ಘರ್ವಾಲೀ ಭಾಷೆಗಳು ಹೆಚ್ಚುಕಡಿಮೆ ಒಂದೇ ಭಾಷೆಯ ಸ್ಥಳೀಯ ರೂಪಗಳಾಗಿವೆಯೆಂದೂ, ಈ ಭಾಷೆಗಳನ್ನು ಮಾತನಾಡುವ ಜನರಿಗೆ ಆಧುನಿಕ ಸಾಹಿತ್ಯದ ಹಿಂದೀ ಭಾಷೆಯನ್ನು ತಿಳಿದುಕೊಳ್ಳುವುದಕ್ಕೆ ಯಾವ ಬಗೆಯ ತೊಂದರೆಯೂ ಇಲ್ಲವೆಂದೂ ಡಾ| ಬರಾನ್ನಿಕೊವ್ ಅವರು ಸೂಚಿಸುತ್ತಾರೆ. ಉತ್ತರ ಭಾರತದ ಬಳಕೆಯ ಮಾತಿನ ಭಾಷೆಗಳಲ್ಲಿ, ರಾಂಪುರ್, ಮುರಾದಾಬಾದ್, ಬಿಜ್ನೋರ್, ಮೀರತ್ ಸಹರಾನ್‌ಪುರ, ಡೆಹರಾಡೂನ್ ಇತ್ಯಾದಿ ಸ್ಥಳಗಳಲ್ಲಿ ಜನರು ಮಾತನಾಡುವ ಖಡೀಬೋಲೀ ಹಿಂದೀ ಭಾಷೆಯು ನಿರಾಡಂಬರ ರೂಪದಲ್ಲಿ ಸಾಹಿತ್ಯಕ ಹಿಂದೀಗೆ ಅತ್ಯಂತ ಸಮೀಪವಾಗಿದೆಯೆಂದು ಡಾ| ಬರಾನ್ನಿಕೊವ್ ಅವರು ಸೂಚಿಸಿದ್ದಾರೆ. ವ್ಯಾಕರಣದ ದೃಷ್ಟಿಯಿಂದ ಹಿಂದೀ ಮತ್ತು ಉರ್ದೂ ಭಾಷೆಗಳ ಸಂರಚನೆಯು ಒಂದೇ ರೀತಿಯಾಗಿದೆಯೆಂಬುದನ್ನು ತೋರಿಸುವುದಕ್ಕೆ ಅನೇಕ ಉದಾಹರಣೆಗಳನ್ನು ಸಹ ಅವರು ಒದಗಿಸಿದ್ದಾರೆ.

ಉತ್ತರ ಭಾರತದಲ್ಲಿ ಮುಸ್ಲಿಮ್ ದೊರೆಗಳ ಆಡಳಿತವು ಸುಮಾರು ಒಂದುಸಾವಿರ ವರ್ಷ ಕಾಲ ನಡೆಯಿತು. ಅದು ಭಾರತದ ಸಾಂಸ್ಕೃತಿಕ ಜೀವನದ ಮೇಲೆ ಅಳಿಸಲಾಗದಂತಹ ಪ್ರಭಾವವನ್ನು ಉಂಟುಮಾಡಿದೆ. ಅರೆಬಿಕ್ ಮತ್ತು ಪರ್ಶಿಯನ್ ಭಾಷೆಗಳ ಶಬ್ದಗಳು ಉತ್ತರ ಭಾರತದ ಭಾಷೆಗಳಲ್ಲೊಂದರಲ್ಲಿ ಮಾತ್ರವೇ ವ್ಯಾಪಕವಾಗಿ ಸೇರಿಕೊಂಡುವು. ಅವು ಸ್ವಲ್ಪಮಟ್ಟಿಗೆ ದಕ್ಷಿಣ ಭಾರತದಲ್ಲಿ ಮುಸ್ಲಿಂ ದೊರೆಗಳ ಆಡಳಿತಕ್ಕೊಳಪಟ್ಟಿದ್ದ ಆಂಧ್ರ ಕರ್ನಾಟಕ ಪ್ರಾಂತಗಳ ಭಾಷೆಗಳಲ್ಲಿಯೂ ಸಹ ಸೇರಿಕೊಂಡುವು. ಈ ರೀತಿಯಾಗಿ ಉರ್ದೂ ಭಾಷೆಯ ಒಂದು ರೂಪವಾದ ದಖನಿ ಭಾಷೆಯು ದಕ್ಷಿಣ ಭಾರತದಲ್ಲಿ ವಿಕಾಸಗೊಂಡಿತು.

ಹಿಂದೀ ಭಾಷೆಯಲ್ಲಿ ಸಂಸ್ಕೃತ ಭಾಷೆಯ ಶಬ್ದಗಳು ಬಹುಸಂಖ್ಯೆಯಲ್ಲಿವೆ, ಅವು ಭಾರತದ ಇಡೀ ಜನತೆಗೆ ಸುಪರಿಚಿತವಾಗಿವೆ. ಪುರಾತನ ಹಿಂದೂ ಜನರ ಧಾರ್ಮಿಕ, ದಾರ್ಶನಿಕ ಸಾಹಿತ್ಯಕ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಲಾಯಿತೆಂಬುದೇ ಇದಕ್ಕೆ ಮುಖ್ಯ ಕಾರಣ. ರಾಮಾಯಣ ಮತ್ತು ಮಹಾಭಾರತ ಕೃತಿಗಳು ಯಾವುದಾದರೊಂದು ರೂಪದಲ್ಲಿ ಯಾವುದಾದರೊಂದು ಭಾಷೆಯಲ್ಲಿ ಭಾರತದ ಪ್ರತಿಯೊಂದು ಮನೆಯಲ್ಲೂ ಪ್ರವೇಶವನ್ನು ಪಡೆದಿವೆ. ಸಾಮಾನ್ಯವಾಗಿ ಭಾರತೀಯರೆಲ್ಲರಿಗೂ ಬಹುಮಟ್ಟಿಗೆ ಸಂಸ್ಕೃತ ಶಬ್ದಗಳ ಪರಿಚಯವಿರುತ್ತದೆ. ಭಾರತದಲ್ಲಿ ವಿಶಾಲ ಸಾಂಸ್ಕೃತಿಕ ಪ್ರವೃತ್ತಿಗಳಿಂದ ದೂರವಾಗಿ ಸಂಕುಚಿತರಾಗಿ ಉಳಿದಿರುವ ಮುಸ್ಲಿಮರಿಗೂ ಸಹ ಇಂತಹ ಶಬ್ದಗಳು ಪರಿಚಿತವಾಗಿವೆ. ಚೀಣಿ ಮತ್ತು ಇಂಗ್ಲೀಷ್ ಭಾಷೆಗಳ ತರುವಾಯ ಜಗತ್ತಿನಲ್ಲಿ ಅತ್ಯಧಿಕ ಸಂಖ್ಯೆಯ ಜನರು ಮಾತನಾಡುವ ಅಥವಾ ತಿಳಿದುಕೊಳ್ಳುವ ಭಾಷೆ ಹಿಂದೀ ಎಂದು ಬರಾನ್ನಿಕೊವ್ ಅವರು ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ ಭಾರತೀಯರ ಜೀವನದಲ್ಲಿ ಪ್ರಚಲಿತ ಬಳಸಲಾಗುತ್ತಿರುವ ಸಂಸ್ಕೃತ, ಅರಾಬಿಕ್ ಪರ್ಶಿಯನ್ ಮತ್ತು ಇಂಗ್ಲೀಷ್ ಮೂಲದ ಭಾಷೆಗಳನ್ನು ದೂರಮಾಡಿದ ಪಕ್ಷದಲ್ಲಿ ಅದರಿಂದ ಹಿಂದೀ ಭಾಷೆಗೇ ಹಾನಿ. ಈ ಪ್ರಯತ್ನವು ಹಿಂದೀ ಭಾಷೆಯ ಹಿತಕರವಾದ, ಚೈತನ್ಯಯುತವಾದ ಬೆಳವಣಿಗೆಗೆ ಪ್ರತಿಬಂಧಕವಾಗುವುದು. ಸೋವಿಯತ್ ಒಕ್ಕೂಟದಲ್ಲಿ ರಶಿಯನ್ ಭಾಷೆಗೆ ಈಗ ಇರುವ ಸ್ಥಾನಕ್ಕೆ ಸಮವಾದ ಸ್ಥಾನದಲ್ಲಿ ಭಾರತದಲ್ಲಿ ಹಿಂದೀ ಇರಬೇಕೆಂದು ಅವರು ನಿರ್ದಿಷ್ಟವಾಗಿ ಶಿಫಾರಸುಮಾಡಿಲ್ಲವಾದರೂ, ಇಂದು ಸೋವಿಯತ್ ನಾಡಿನಲ್ಲಿ ರಶಿಯನ್ ಭಾಷೆಗಿರುವಂತಹ ಸ್ಥಾನವೇ ಭವಿಷ್ಯತ್ತಿನಲ್ಲಿ ಹಿಂದೀಗೆ ದೊರೆಯುವುದೆಂದು ಅವರು ಸ್ಫುಟವಾಗಿ ಸೂಚಿಸಿದ್ದಾರೆ.

("Attributes of Hindi as India's Link Language" By T. S. Hegde, ಎಂಬ ಲೇಖನದ ಅನುವಾದ.)

—o—

ಕುಂದಾಪುರದಲ್ಲಿ ಲಾಯನ್ಸ್ ಕ್ಲಬ್

ಉಡುಪಿ ಲಾಯನ್ಸ್ ಕ್ಲಬ್ಬಿನ ಪ್ರಚೋದನೆಯಿಂದ ರೂಪುಗೊಂಡ ಕುಂದಾಪುರ ಲಾಯನ್ಸ್ ಕ್ಲಬ್ಬನ್ನು ತಾ. 18ರಂದು ಅಂತಾರಾಷ್ಟ್ರೀಯ ಲಾಯನ್ಸ್ ಪ್ರತಿನಿಧಿ ಶ್ರೀ| ವಿಸ್ಪಿ ಇಂಜಿನಿಯರ್‌ರವರು ಉದ್ಘಾಟಿಸಿದರು.

ಮನೆತೆರಿಗೆ ಏರಿಗೆ ಪರಿಶೀಲನೆಗೆ ಸಮಿತಿ

ಮನೆತೆರಿಗೆಗಳನ್ನು ಮಂಗಳೂರು ನಗರ ಸಭೆಯ ಕ್ಷೇತ್ರದಲ್ಲಿ ನ್ಯಾಯಬಾಹಿರ ರೀತಿಯಲ್ಲಿ ಏರಿಸಿದ ಬಗ್ಗೆ ಪರಿಶೀಲಿಸಲು ಮತ್ತು ಸಾರ್ವಜನಿಕರಿಗೆ ಬೇಕಾದ ಸಲಹೆ ಸಹಕಾರ ಕೊಡಲು ಭಾರತೀಯ ಜನ ಸಂಘದ ಮಂಗಳೂರು ಮಂಡಲ ಸಮಿತಿಯು ನಗರಸಭಾ ಸದಸ್ಯರುಗಳಾದ ಸರ್ವಶ್ರೀ ಜಿ. ರಮೇಶ ಕಾಮತ್, ಬಿ. ರಘುನಾಥ ಕೊಟ್ಯಂಕರ್ ಮತ್ತು ಯು. ಪಾಂಡುರಂಗ ಮಲ್ಯ ಈ ಮೂರು ಮಂದಿಯ ಸಮಿತಿಯೊಂದನ್ನು ರಚಿಸಿದೆ.

ಸಿಮೆಂಟ್ ಪರ್ಮಿಟ್

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರರು ಹೊರಡಿಸಿದ ಹೊಸ ಪ್ರಕಟಣೆಯೊಂದರ ಪ್ರಕಾರ ಸ್ಥಳೀಯ ತಾಲೂಕು ತಹಸಿಲ್ದಾರರು 10ಚೀಲಗಳ ವರೆಗೂ ಅಸಿಸ್ಟಾಂಟ್ ಕಮಿಶನರರು 25 ಚೀಲಗಳ ವರೆಗೂ ಸಿಮೆಂಟ್ ಪಡೆಕೊಳ್ಳುವ ಬಗ್ಗೆ ಪರ್ಮಿಟು ಕೊಡುವ ಅಧಿಕಾರ ಹೊಂದಿರುವರೆಂದು ತಿಳಿಸಲಾಗಿದೆ.

——

ನೋಟೀಸು

ಬೆಳ್ತಂಗಡಿ ಮುನ್ಸಿಫ್ ಕಮ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ

R. R. C. 50/1973.

ಚಂಪಾವತಿ ... ... ಅರ್ಜಿದಾರಳು.

ಕುಮಾರಯ್ಯ ಹೆಗ್ಡೆ ಕೂಡಾ ... ಎದ್ರಿರು.


ಬೆಳ್ತಂಗಡಿ ತಾಲೂಕು ಕೊಕ್ಕಾಡಿ ಗ್ರಾಮದ ಅತ್ರಜಾಲು ಎಂಬಲ್ಲಿರುವ ಎಲ್ಯಪ್ಪೆ ಹೆಂಗ್ಸಿನ ಮಗ 1ನೇ ಎದ್ರಿ ಕುಮಾರಯ್ಯ ಹೆಗ್ಡೆಯವರಿಗೆ:

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರಳು ಗೇಣಿ ವಸೂಲಿ ಬಗ್ಗೆ ಅರ್ಜಿಮಾಡಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ಈ 1973ನೇ ಇಸ್ವಿ ಅಗೋಸ್ತು ತಿಂಗಳು ತಾರೀಕು 21ರಲ್ಲು ಹಗಲು 11 ಘಂಟೆಗೆ ಈ ಕೋರ್ಟು ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ತಿಳಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

ಬೆಳ್ತಂಗಡಿ 21-4—1973 } ಕೆ. ವೀರಸಿಂಹ, ಅರ್ಜಿದಾರಳ ಕಡೆ ಎಡ್ವೊಕೇಟ್.

1969 ರಿಂದ ಪ್ರತಿ ವರ್ಷವೂ ಠೇವಣಿಗಳ ಅದ್ಭುತ ಬೆಳವಣಿಗೆ !



ವರ್ಷ	ಕ್ಯಾಪಿಟಲ್ (ಪೈಡ್‌ಅಪ್)	ರಿಸರ್ವ್ಸ್	ಅಡ್ವಾನ್ಸ್‌ಸ್	ಶಾಖೆಗಳು
1968	13.8 ಲಕ್ಷ	7.0 ಲಕ್ಷ	882.1 ಲಕ್ಷ	89
1972	59.6 ಲಕ್ಷ	36.0 ಲಕ್ಷ	3600.0 ಲಕ್ಷ	184

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3. ಆಡಳಿತ ಕಚೇರಿ : ರೇಸ್ ಕೋರ್ಸ್ ರೋಡ್, ಬೆಂಗಳೂರು-1,

ಚೆಯರ್ಮನ್ : ಎಂ. ಸುಂದರ್‌ರಾಮ್ ಶೆಟ್ಟಿ

ವಿಜಯ ಬ್ಯಾಂಕ್–ಪ್ರಗತಿಯಲ್ಲಿ ನಿಮ್ಮ ಸಹವರ್ತಿ

OBM-2519 KN

ಶ್ರೀ ಗೋಕರ್ಣ ಪರ್ತಗಾಳೀ ಜೀವೋತ್ತಮ ಮಠದ ಪರಂಪರೆ

ಶ್ರೀ ಗೋಕರ್ಣಪರ್ತಗಾಳೀ ಜೀವೋತ್ತಮ ಮಠದ ಯತಿಪರಂಪರೆಯು ಹದಿನೈದನೇ ಶತಮಾನದಿಂದ, ಅಂದರೆ 1476 ಎಪ್ರಿಲ್‌ನಿಂದ— ಇಂದಿಗೆ 497 ವರ್ಷಗಳ ಹಿಂದೆ—ಪ್ರಾರಂಭವಾಯಿತು.

ದ್ವೈತಮತಪ್ರತಿಷ್ಠಾಪನಾಚಾರ್ಯ ಶ್ರೀ ಮಧ್ವಾಚಾರ್ಯರ ಶಿಷ್ಯಪ್ರಶಿಷ್ಯರಲ್ಲೊಬ್ಬರಾದ ಶ್ರೀ ರಾಮಚಂದ್ರತೀರ್ಥರು (ಫಲಿಮಾರು ಮಠ) ತೀರ್ಥಾಟನಮಾಡುತ್ತ ಬದರಿಕಾಶ್ರಮಕ್ಕೆ ತಲುಪಿ, ಅಲ್ಲಿ ವಾಸವಾಗಿದ್ದಾಗ, ತಮ್ಮ ಅವಸಾನ ಕಾಲ ಸನ್ನಿಹಿತವಾಯಿತೆಂದು ಅವರಿಗೆ ಅನಿಸಿ, ಅವರು ತಮ್ಮೊಂದಿಗೆ ವಿದ್ಯಾಭ್ಯಾಸಮಾಡುತಿದ್ದ ಗೌಡಸಾರಸ್ವತಬ್ರಾಹ್ಮಣ ಬ್ರಹ್ಮಚಾರಿ ಮಾಧವನೆಂಬ ವಟುವಿಗೆ ಭಗವತ್ಪ್ರೇರಣೆಯಿಂದ ಸನ್ಯಾಸದೀಕ್ಷೆ ಕೊಟ್ಟರು. ಇದು ಶ್ರೀ ಶಾಲಿವಾಹನ ಶಕ 1398 ಮನ್ಮಥನಾಮಸಂವತ್ಸರದ ಚೈತ್ರ ಶುಕ್ಲ ದ್ವಿತೀಯೆಯಂದು (1476 ಎಪ್ರಿಲ್; ಇಂದಿಗೆ 497 ವರ್ಷಗಳ ಹಿಂದೆ), ಬದರೀಕಾಶ್ರಮದಲ್ಲಿ ನಡೆಯಿತು.

ಶ್ರೀ ರಾಮಚಂದ್ರತೀರ್ಥರು ನೂತನ ಸನ್ಯಾಸಿಗೆ ಶ್ರೀ ನಾರಾಯಣತೀರ್ಥ ಎಂದು ನಾಮಕರಣಮಾಡಿ, ತಮ್ಮ ಉಪಾಸ್ಯದೇವತೆ ಶ್ರೀ ರಾಮನ ವಿಗ್ರಹವನ್ನೂ, ದಂಡಕಮಂಡಲು, ಪಾದುಕೆಗಳನ್ನೂ ಇತ್ತು, "ನೀನು ನನ್ನ ದೇಹಾವಸಾನದ ನಂತರ ಊರಿಗೆ ಮರಳಿ ಧರ್ಮ ಪ್ರಸಾರಮಾಡು" ಎಂದು ಆದೇಶವಿತ್ತರು. ಶ್ರೀ ನಾರಾಯಣತೀರ್ಥರು ಉಡುಪಿಗೆ ಹೋಗಿ ಶ್ರೀ ಕೃಷ್ಣನ ದರ್ಶನಪಡೆದು ಭಟಕಳಕ್ಕೆ ಬಂದರು. ಅಲ್ಲಿ ಸ್ವಸಮಾಜಬಾಂಧವರು ಅವರನ್ನು ಅತ್ಯಂತ ಹರ್ಷದಿಂದ ಸತ್ಕರಿಸಿದರು. ಅವರು ಭಟಕಳದಲ್ಲೇ ತಮ್ಮ ಮಠವನ್ನು ಸ್ಥಾಪಿಸಿದರು.

—ಹೀಗೆ, ಶ್ರೀ ನಾರಾಯಣತೀರ್ಥರೇ ಈಗಣ ಗೋಕರ್ಣಪರ್ತಗಾಳಿ ಜೀವೋತ್ತಮ ಮಠದ ಮೂಲ ಸ್ಥಾಪಕರು.

ಶ್ರೀ ಗೋಕರ್ಣ ಮಠದ ಪರಂಪರೆ

	ಹೆಸರು	ವೃಂದಾವನ ಸ್ಥಳ
1	ನಾರಾಯಣತೀರ್ಥ—	ಭಟಕಳ
2	ವಾಸುದೇವತೀರ್ಥ—	ಪಂಢರಪುರ
3	ಜೀವೋತ್ತಮತೀರ್ಥ—	ಭಟಕಳ
4	ಪುರುಷೋತ್ತಮತೀರ್ಥ—	ಗೋಕರ್ಣ
5	ಅಣುಜೀವೋತ್ತಮತೀರ್ಥ—	ಡಿಚೋಲಿ
6	ರಾಮಚಂದ್ರತೀರ್ಥ—	ರೇವಣ
7	ದಿಗ್ವಿಜಯ ರಾಮಚಂದ್ರತೀರ್ಥ—	ಅಂಕೋಲಾ
8	ರಘುಚಂದ್ರತೀರ್ಥ—	ಹೊನ್ನಾವರ
9	ಲಕ್ಷ್ಮೀನಾರಾಯಣತೀರ್ಥ—	ಗೋದಾವರಿ ನದೀತೀರ
	ಶಿಷ್ಯ—ವ್ಯಾಸತೀರ್ಥ—	ಪರ್ತಗಾಳಿ
10	ಲಕ್ಷ್ಮೀಕಾಂತತೀರ್ಥ—	ಹೊನ್ನಾವರ
11	ರಮಾಕಾಂತತೀರ್ಥ—	ಅಂಕೋಲಾ
12	ಕಮಲಾಕಾಂತತೀರ್ಥ—	ಗೋಕರ್ಣ
13	ಶ್ರೀಕಾಂತತೀರ್ಥ—	ಪರ್ತಗಾಳಿ
14	ಭೂವಿಜಯ ರಾಮಚಂದ್ರತೀರ್ಥ—	ಅಂಕೋಲಾ
15	ರಮಾನಾಥತೀರ್ಥ—	ವೆಂಕಟಾಪುರ
16	ಲಕ್ಷ್ಮೀನಾಥತೀರ್ಥ—	ಬರೋದಾ
17	ಆನಂದತೀರ್ಥ—	ಪರ್ತಗಾಳಿ
18	ಪೂರ್ಣಪ್ರಜ್ಞತೀರ್ಥ—	"
19	ಪದ್ಮನಾಭತೀರ್ಥ—	"
20	ಇಂದಿರಾಕಾಂತತೀರ್ಥ—	"
	ಶಿಷ್ಯ—ನರಹರಿತೀರ್ಥ—	"
21	ಕಮಲಾನಾಥತೀರ್ಥ—	"
22	ದ್ವಾರಕಾನಾಥತೀರ್ಥ—	"

ಉಡುಪಿ ಅಷ್ಟಮಠದ ಪೈಕಿ ಫಲಿಮಾರು ಮಠದ ಪರಂಪರೆ ಹೀಗಿದೆ:

1. ಹೃಷಿಕೇಶತೀರ್ಥ. 2. ಸಮಾತ್ಮೇಶ್ವರತೀರ್ಥ. 3. ಸಂಭವತೀರ್ಥ. 4. ಅಪರಾಜಿತತೀರ್ಥ. 5. ವಿದ್ಯಾಮೂರ್ತಿತೀರ್ಥ. 6. ಶ್ರೀನಿಧಿತೀರ್ಥ. 7. ವಿದ್ಯೇಶತೀರ್ಥ 8. ಶ್ರೀ ವಲ್ಲಭತೀರ್ಥ. 9. ಜಗದ್ಭೂಷಣತೀರ್ಥ. 10. ರಾಮಚಂದ್ರ ತೀರ್ಥ............

(ಹತ್ತನೆಯವರಾದ ಶ್ರೀ ರಾಮಚಂದ್ರತೀರ್ಥರೇ, ಬದರಿಕಾಶ್ರಮದಲ್ಲಿ ಶ್ರೀ ನಾರಾಯಣತೀರ್ಥರವರಿಗೆ ಸನ್ಯಾಸದೀಕ್ಷೆ ಕೊಟ್ಟದ್ದರು.

—೦—

ಸಚಿವರ ಪ್ರವಾಸದಿನಗಳು ಮತ್ತು ಅವರು ಪಡೆದ ಭತ್ತೆ ಎಷ್ಟು?

ಮೈಸೂರು ರಾಜ್ಯದ ಸಚಿವರು 1972ನೇ ಎಪ್ರಿಲ್ 1 ರಿಂದ 1973ನೇ ಜನವರಿ 31ರ ವರೆಗೆ, ಹತ್ತು ತಿಂಗಳುಗಳಲ್ಲಿ ಮಾಡಿದ ಪ್ರವಾಸ ಎಷ್ಟು ಮತ್ತು ಅವರು ಪಡೆದ ಪ್ರಯಾಣ ಭತ್ತೆ ಎಷ್ಟು ಎಂದು, ಎಪ್ರಿಲ್ ತಾ. 13ರಂದು ವಿಧಾನಪರಿಷತ್ತಿನಲ್ಲಿ ಶ್ರೀ ಎ. ಕೆ. ಸುಬ್ಬಯ್ಯ (ಜನಸಂಘ) ಮತ್ತು ಶ್ರೀ ಪಿ. ಎಂ. ನಾಡಗೌಡ (ಸಂ. ಕಾಂಗ್ರೆಸ್) ಇವರು ಕೇಳಿದ ಪ್ರಶ್ನೆಗೆ, ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸ್‌ರವರು ಕೊಟ್ಟ ಉತ್ತರದಿಂದ, ಈ ಕೆಳಗಿನ ವಿವರಗಳು ಹೊರಬಿದ್ದಿವೆ.

ಸಚಿವರು			31-1-73ರ ವರೆಗೆ 10 ತಿಂಗಳಲ್ಲಿ ಪ್ರವಾಸಮಾಡಿದ ದಿನಗಳು	31-1-73ರ ವರೆಗೆ ಪಡೆದ ಪ್ರವಾಸ ಭತ್ತೆ
ಸರ್ವಶ್ರೀ				
1 ಡಿ. ದೇವರಾಜ ಅರಸ್	....	...	87	26,979—80
2 ಎಚ್. ಎಂ. ಚನ್ನಬಸಪ್ಪ	...	...	86	13,376—95
3 ಎಚ್. ಸಿದ್ಧವೀರಪ್ಪ	...	...	106½	18,876—40
4 ಬಿ. ಬಸವಲಿಂಗಪ್ಪ	...	...	123	18,606—70
5 ಎಂ. ಮಲ್ಲಿಕಾರ್ಜುನಸ್ವಾಮಿ	...	....	123	28,209—51
6 ಎ. ಆರ್. ಬದರಿ ನಾರಾಯಣ ಅಯ್ಯಂಗಾರ್	...		121	22,620—00
7 ಎ. ಶಂಕರ ಆಳ್ವ	...	...	89½	12,719—16
8 ಎನ್. ಹುಚ್ಚಮಾಸ್ತಿ ಗೌಡ	...	...	109	18,515—80
9 ಅಜೀಜ್ ಸೇಟ್	...	....	147	16,890—40
10 ಕೆ. ಎಚ್. ಪಾಟೀಲ	....	...	107	23,479—69
11 ಎಂ. ವೈ. ಘೋರ್ಪಡೆ	...	...	75	15,933—75
12 ಎಸ್. ಎಂ. ಕೃಷ್ಣ	...	...	98	18,781—20
13 ಡಿ. ಕೆ. ನಾಯ್ಕರ್	...	...	87	9,790—40
ರಾಜ್ಯಮಟ್ಟದ ಸಚಿವರು				
14 ಎನ್. ಚಿಕ್ಕೇಗೌಡ	...	....	92	14,108—45
15 ಎಚ್. ಎನ್. ನಂಜೇಗೌಡ	...	...	92	14,463—35
16 ಇ. ಇ. ವಾಜ್	...	....	85¼	17,370—40
17 ಕೆ. ಟಿ. ರಾಥೋಡ್	...	...	103	15,108—80
18 ಎಸ್. ಬಿ. ನಾಗರಾಳ	...	...	116	16,067—80
19 ವಿ. ಎಸ್. ಕೌಜಲಗಿ	...	...	95	19,903—30
20 ಶಿವಣ್ಣ ಭೀಮಪ್ಪ	...	...	114	19,647—80
21 ಆರ್. ಡಿ. ಕಿತ್ತೂರ	...	...	90	14,354—20
22 ದೇವೇಂದ್ರಪ್ಪ ಘಾಳಪ್ಪ	...	...	80	13,428—60

ಶ್ರೀ ಕೆ. ಪಿ. ಜೆ. ಪ್ರಭುಗಳವರಿಗೆ ಮಾತೃವಿಯೋಗ

ದಿ| ಕಾರ್ಕಳ ಪುಲಿಕೇರಿ ಶೇಷಗಿರಿ ಪ್ರಭುಗಳವರ ಧರ್ಮಪತ್ನಿ, ಕೆನರಾ ಬ್ಯಾಂಕಿನ ಚೆಯರ್‌ಮೇನ್ ಮತ್ತು ಮೆನೇಜಿಂಗ್ ಡೈರೆಕ್ಟರರಾಗಿರುವ ಶ್ರೀ| ಕೆ. ಪಿ. ಜೆ. ಪ್ರಭುಗಳವರ ಮಾತೋಶ್ರೀ ಶ್ರೀಮತಿ ಕೆ. ಪಿ. ಕಮಲಾಬಾಯಿಯವರು ಇದೇ ತಾ. 25ನೇ ಬುಧವಾರ ರಾತ್ರೆ 11-30ಕ್ಕೆ, ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ತಮ್ಮ ದ್ವಿತೀಯ ಪುತ್ರ ಶ್ರೀ| ಕೆ. ಪಿ. ಮುಕುಂದ ಪ್ರಭುಗಳವರ ಸ್ವಗೃಹ "ಸುದರ್ಶನ"ದಲ್ಲಿ, ದೈವಾಧೀನರಾದರೆಂದು ತಿಳಿಸಲು ವಿಷಾದಿಸುವೆವು. ನಿಧನ ಕಾಲದಲ್ಲಿ ಅವರಿಗೆ 79 ವರ್ಷ ತುಂಬಿತ್ತು.

ಮಂಗಳೂರಿನ ಪ್ರಸಿದ್ಧ ಬಾಬಪೈ ಮನೆತನದ ದಿವಂಗತ ರಾವ್‌ಬಹದ್ದೂರ್ ಡಾ| ಎಂ. ಕೇಶವ ಪೈಯವರ ಸಹೋದರಿಯಾದ ಶ್ರೀಮತಿ ಕೆ.ಪಿ. ಕಮಲಾಬಾಯಿಯವರು ಕಳೆದ ಐದು ವರ್ಷಗಳಿಂದ, ವೃದ್ಧಾಪ್ಯದ ದೆಸೆಯಿಂದ ಶಯ್ಯಾಗ್ರಸ್ತರಾಗಿದ್ದು ಶುಶ್ರೂಷೆ ಹೊಂದುತಿದ್ದರು.

ನಿಧನವಾರ್ತೆಯು ರಾತ್ರೆಯೇ ಬೆಂಗಳೂರಿಗೆ ತಲಪಿ, ಬೆಂಗಳೂರಿನಿಂದ ಶ್ರೀ| ಕೆ. ಪಿ. ಜೆ. ಪ್ರಭುಗಳವರು ಸಹಧರ್ಮಿಣಿ ಶ್ರೀಮತಿ ಶಾಂತೇರಿ ಜೆ. ಪ್ರಭುಗಳವರೊಂದಿಗೆ ಮಂಗಳೂರಿಗೆ ಧಾವಿಸಿಬಂದರು. ವಿಶಾಲ ಬಂಧುವರ್ಗದವರೂ ಸ್ನೇಹಿತರೂ ಬಂದು, ಮೃತರಿಗೆ ಕೊನೆಯ ಗೌರವ ಸಲಿಸಿದರು. ತಾ. 26ನೇ ಗುರುವಾರ ಬೆಳಗ್ಗೆ 8-30ಕ್ಕೆ ಮೃತರ ಅಂತ್ಯಕ್ರಿಯೆಗಳು ನೆರವೇರಿದುವು.

ಶ್ರೀಮತಿ ಕಮಲಾಬಾಯಿಯವರು ಇಬ್ಬರು ಪುತ್ರರನ್ನೂ, ಓರ್ವ ಪುತ್ರಿ (ಶ್ರೀಮತಿ ನಾರಾಯಣಿಬಾಯಿ, ಸಿಕಂದರಾಬಾದ)ಯನ್ನೂ ಬಿಟ್ಟು ಅಗಲಿರುವರು.

—೦—

ದ.ಕ. ಜಿಲ್ಲಾ ಚದುರಂಗ ಸ್ಪರ್ಧೆ

ಕಾರ್ಕಳದ 'ನೀಲ್ ಕಮಲ್' ಕ್ರೀಡಾ ಕ್ಲಬ್ಬಿನ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾಮಟ್ಟದ ಚದುರಂಗ (ಚೆಸ್) ಸ್ಪರ್ಧೆಯನ್ನು ಮೇ ತಾ. 19ರಂದು ಏರ್ಪಡಿಸಲು ನಿರ್ಧರಿಸಲಾಗಿದೆ. ಸ್ಪರ್ಧೆಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳಾಗಿ ರೂ. 300, 200 ಮತ್ತು 100 ಇಟ್ಟಿರುವರು. ಚದುರಂಗ ಕ್ರೀಡಾ ಕನ್ವೀನರ್ ಆಗಿ ಕಾರ್ಕಳ ಸಿಂಡಿಕೇಟ್ ಬ್ಯಾಂಕಿನ ಮೆನೇಜರ್ ಶ್ರೀ| ಎಸ್. ಸೀತಾರಾಮ ರಾವ್ ಅವರು ನಿರ್ವಹಿಸುವರು.

ಜಿಲ್ಲೆಗೆ ಅಕ್ಕಿ

ದಕ್ಷಿಣ ಕನ್ನಡದಲ್ಲಿ ಕಡಿಮೆ ಬೆಲೆಗೆ ಅಕ್ಕಿ ಪೂರೈಸಲು ಸರಕಾರೀ ಮಾರ್ಕೆಟಿಂಗ್ ಸೊಸೈಟಿ ಮೂಲಕ 3500 ಕ್ವಿಂಟಾಲ್ ಭತ್ತ, 4500 ಕ್ವಿಂಟಾಲ್ ಅಕ್ಕಿ ಖರೀದಿಸಿ ಜಿಲ್ಲೆಗೆ ತರಲಾಗಿದೆಯೆಂದೂ ಶಿವಮೊಗ್ಗದಿಂದಲೂ 2,000 ಕ್ವಿಂಟಾಲ್ ಅಕ್ಕಿ ಖರೀದಿಸಲಾಗಿದೆಯೆಂದೂ, ಕೇಂದ್ರ ಸಹಕಾರೀ ಬ್ಯಾಂಕಿನ ಅಧ್ಯಕ್ಷ ಶ್ರೀ| ಬಿ. ನಾರಾಯಣಸ್ವಾಮಿ, ಎಮ್. ಎಲ್. ಸಿ., ಅವರು ಹೇಳಿರುವರು.

—೦—

NOTICE

In the Court of the Munsif cum Magistrate, Belthangady.

Ex. C. 321/72
in O. S. 87/68.

P. Cherdappa Pai & Others ... Petitioner

Vs.

Kusuma & another ... Respondents.

To

The 2nd respondent K. Ananthayya Hegde, S/o Kusuma, Navoor Village, Belthangady Taluk.

Whereas in the above Execution the Petitioners have applied for sale of the immovable property belonging to you, and fully described in the Sale Proclamation, you are hereby informed that the 12th day of June 1973 has been fixed for settling the terms of the proclamation of Sale and also for granting permission to the Petitioners to bid and set off.

(By order of Court)

K. Veerasimha,
Advocate for Petitioner.

Belthangady,
9-4-1973.

NOTICE

In the Court of the Munsif cum Magistrate, Belthangady.

S. C. No. 3/1973.

Shantha Bai ... Plaintiff

Vs.

Krishna Rai ... Defendant.

To

The defendant Krishna Rai, S/o M. B. Koragappa Rai, Belthangady Kasba Village, Belthangady Taluk.

Whereas the Plaintiff has filed the above suit against you for the reliefs claimed on the Plaint, you are hereby summoned to appear before this Court in person or by a Pleader duly instructed, on the 6th day of June 1973 at 11 A. M., failing which the suit will be decided in your absence.

(By order of Court)

K. Veerasimha,
Advocate for Plaintiff.

Belthangady,
18-4-1973.

ಲೇಖಾಂಕ—೧೨೪೩.

ಲಾಭ ಭಾವೇಶ ಫಲ—೧೭೪

(ಲಾಭೇಶ ತೃತೀಯದಲ್ಲಿ)

(ಎಂ. ಸುಬ್ರಾಯನ್.)

ಲಾಭೇಶೇ ಸಹಜೇವಿತ್ತೇ
ತೀರ್ಥೇಷು ತತ್ಪರೋ ಭವೇತ್ ।
ಕುಶಲಃ ಸರ್ವಕಾರ್ಯೇಷು
ಕೇವಲಂ ಶೂಲರೋಗವಾನ್ ॥
(ಲೋಮಶ)

ಲಾಭಾಧಿಪನು ಮೂರನೆ ಮನೆಯಲ್ಲಿ ರುವನಾದರೆ ತೀರ್ಥಯಾತ್ರೆಯಲ್ಲಿ ಆಸಕ್ತನಾಗುವನು. ಎಲ್ಲ ಕೆಲಸಗಳಲ್ಲಿಯೂ ಸಮರ್ಥನಾಗುವನು. ಆದರೆ ಅವನಿಗೆ ಉದರ ಶೂಲೆಯ ರೋಗವು ಇರುವುದು. ಇದರಿಂದ ಪೀಡಿತನಾಗುವನು.

ಸಹಜವಿತ್ತಯುತಶ್ಚ ಸುಬಾಂಧವಃ
ಸಹಜ ವತ್ಸಲ ಏವ ನರಃ ಸದಾ ।
ಸಹಜಗೇ ಭವಭಾವಪತೌ ಶುಚಿಃ
ಸ್ವಜನ ಮಿತ್ರಜನಾದತಿ ಲಾಭದಃ ॥
(ಯವನ)

ತೃತೀಯದಲ್ಲಿ ಮೂರನೆ ಮನೆಯ ಅಧಿಪನು ಇದ್ದರೆ ಸಹೋದರರು ಇರುವರು. ಸಹೋದರರು ಸಂಪತ್ತಿನಿಂದ ಕೂಡಿರುವರು. ಉತ್ತಮ ಬಂಧುಜನರಿಂದ ಕೂಡಿರುವನು. ಯಾವಾಗಲೂ ಸಹೋದರರಲ್ಲಿ ಪ್ರೀತಿಯಿಂದ ಕೂಡಿರುವನು. ಪವಿತ್ರನಾದ ಮನುಷ್ಯನಾಗಿರುವನು. ಸ್ವಜನರಿಂದಲೂ ಗೆಳೆಯರಿಂದಲೂ ತುಂಬಾ ಲಾಭವನ್ನು ಹೊಂದುವನು.

ತೃತೀಯದಲ್ಲಿ ಲಾಭಾಧಿಪನು ಪಾಪಗ್ರಹನಾಗಿದ್ದರೆ ಸಹೋದರರು ಯಾವಾಗಲೂ ಶುದ್ಧ ಮನಸ್ಕರಲ್ಲ. ಅವರು ವಂಚನೆಯನ್ನು ಮಾಡುವರು. ಅಣ್ಣಂದಿರನ್ನು ಮೋಸಗೊಳಿಸುವುದೇ ಅವರ ಜೀವನವಾಗಿರುವುದು. ಅವನ ಸಹೋದರರು ಕೋರ್ಟಿಗೆ ಎಳೆದೊಯ್ಯುವರು. ಕೋರ್ಟಿಗೆ ಕೊಂಡೋಗಿ ಸುಳ್ಳು ಪುರಾವೆ ಮಾಡಹೊರಡುವರು. ಧನದ ಮೂಲಕ ಅಧಿಕಾರೀ ಜನರನ್ನು ಸೆಳೆಯುವ ಪ್ರಯತ್ನ ನಡೆದುಬರುವುದು. ಸಹೋದರರು ಶತ್ರುಗಳಾಗಿ ನೆಲಸುವರು. ಶತ್ರುತನದ ವರ್ತನೆಗಳೇ ಬೆಳೆದುಬಂದು ಮಾನವ ಜೀವನದಲ್ಲಿರಬೇಕಾದ ಗುಣಧರ್ಮಗಳಾವವೂ ನೆಲಸಿರದೆ ಇರುವರು. ಅದೂ ಅಲ್ಲದೆ ಶತ್ರುತನದ ನೆಲೆಯಿಂದ ಇದ್ದು ಕೌರವರು ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಲೆಳಸಿದ ವರ್ತನೆಯನ್ನೂ ಹಿಡಿಯುವರು. ಹೆಂಗುಸರು ಮಕ್ಕಳನ್ನು ಪೀಡಿಸುವ ಕೌರವನ ಚಾಳಿ ಅವರಲ್ಲಿ ಕಂಡುಬರಲಿದೆ. ಗುರುಜನರನ್ನೂ ಬಂಧುಜನರನ್ನೂ ಧಿಕ್ಕರಿಸಿ ನುಡಿಯುವಿಕೆ ಅಪಮಾನಗೊಳಿಸುವಿಕೆ ಅಹಂಭಾವ ವರ್ತನೆಗಳು ಬಳೆದು ಅವರ ದುರ್ವರ್ತನೆಯೇ ಅವರನ್ನು ನಾಶಕ್ಕೆ ತರುವುದು, ಎಂದು ಪಾಪಗ್ರಹರ ವಿಷಯದಲ್ಲಿ ಹೇಳಿರುವರು.

ಶುಭಗ್ರಹನು ಲಾಭಾಧಿಪನಾಗಿ ಮೂರರಲ್ಲಿದ್ದರೆ, ಸಹೋದರಭಾವದ ಸುಖವಿರುವುದಿಲ್ಲ. ಶತ್ರುಕುಲವನ್ನು ದಮನಿಸುವನು. ತಾನು ಸಂಪತ್ತಿನಿಂದ ಕೂಡಿರುವನು; ಸಹೋದರರನ್ನು ಪೋಷಣೆಗೊಂಡು ಬರುವನು. ಸ್ವಾವಲಂಬಿಯಾಗಿರುವನು. ಕೌಟುಂಬಿಕ ಬಂಧುಜನರಿಂದ ಮಾನಸಿಕ ಶಾಂತಿಯನ್ನು ಹೊಂದುವುದಿಲ್ಲ. ಜೀವನದಲ್ಲಿ ಹಲವಾರು ವ್ಯವಸಾಯ ಸಂಪರ್ಕಗಳು ಬರುವವು. ದಾಂಪತ್ಯ ಜೀವನದಲ್ಲಿದ್ದು ಹೆಂಡತಿಯ ದೇಹಾರೋಗ್ಯದ ನೆಲೆ ಉತ್ತಮವಾಗಿರುವುದಿಲ್ಲ. ವಾತವಿಕಾರವು ಕಂಡುಬರುವುದು. ಹುಟ್ಟುಮನೆಯಿಂದ ದೂರಗತನಾಗಿರುವನು.

ಕುಜನು ಲಾಭಾದಿಪತ್ಯಗೊಂಡು ಮೂರಂಲ್ಲಿದ್ದರೆ ಸಹೋದರರಿಂದ ಸುಖಲಾಭವಿರುವುದಿಲ್ಲ, ಸಹೋದರರು ಇದ್ದರೆ ಅವರು ಕುಲಕಂಟಕರಾಗಿರುವರು. ಪ್ರಾಯಕ್ಕೆ ಬಂದಂತೆ ದ್ವೇಷಾಸೂಯೆ, ಮದಗಳಿಂದ ಪರಿಪೂರ್ಣರಾಗಿ ಬರುವರು. ವೇದಾಂತ ಮಾತನಾಡುವಿಕೆ ಬೆಕ್ಕು ಸನ್ಯಾಸಿಯ ಜೀವನದ ಸಹೋದರರನ್ನೂ ಕಾಣಲು ಶಕ್ಯವಿದೆ. ಕೇವಲ ಉದರಂಭರಣದ ವ್ಯವಸಾಯದ ಜೀವನವಿದ್ದು ಮಾನಾಪಮಾನಗಳನ್ನು ಅರಿಯದ ಪಶುಜೀವಿಯಾಗಿರುವರು. ಪಶು ಹಾಯುವಂತೆ ಹಾದು ಪೀಡೆಯೇ ಕೊಡುವಿಕೆ ಕಂಡುಬರಲಿದೆ.

ಶನಿಯಾದರೆ ಅಲಸ್ಯಜೀವಿಗಳಾದ ಸಹೋದರರು. ಅವರು ಕುಟುಂಬದ್ವೇಷಿಗಳೇ ಇರುವರು. ಸಂಪತ್ತನ್ನು ಸಂಗ್ರಹಿಸುವರು. ಸಂಪತ್ತಿನ ಹಿರಿತನದಿಂದ ತುಂಬಿ ಹೀನಕೃತ್ಯಗಳೂ ನಡೆಯುವವು. ಸಮಾಜದಲ್ಲಿ ಸಂಪತ್ತಿನ ಬೆಲೆ ಇದೆ. ಅದಕ್ಕೆ ಜನ ಸೇರುವರು. ಮಾನವನಿಗೆ ಸಂಪತ್ತು ಬಂಧಮೋಕ್ಷಗಳಿಗೆ ಸಾಧನ ಎಂಬುದನ್ನು ತಿಳಿದವರಾಗಿ ನಡೆಯುವರು. ಸಂಪತ್ತನ್ನು ದೋಚಲು ದಾಸವೃತ್ತಿ ನಡೆಯುವುದು. ದಯೆಯು ಧರ್ಮವಿರದೆ ಹಿಂಸೆಯಿಂದ ಧರ್ಮದ ನೆಲೆ ಎಂಬ ತಿಳಿವು ಅವರಲ್ಲಿರುವುದು. ರಿಕಾರ್ಡು ವ್ಯವಹಾರಾದಿಗಳು ಪೂರ್ಣ ವಂಚನಾಪೂರ್ಣವಾಗಿ ನೆಲಸುವವು.

ಏಕಾದಶದ ಅಧಿಪನು ಶುಭಗ್ರಹನಾದರೆ ಸ್ವಪರಾಕ್ರಮದಿಂದಲೇ ಅಭ್ಯುದಯಗೊಂಡು ಸಂಪತ್ತನ್ನು ಸಂಗ್ರಹಿಸುವನು. ಸಹೋದರರಿಗೆ ಸಹಾಯಿಸುವಿಕೆ ಇದೆ. ಸ್ವಾವಲಂಬಿಯಾಗಿರುವನು. ಈ ರೀತಿಯಿಂದ ಶಾಸ್ತ್ರಕಾರರು ಫಲಬೋಧನೆ ಮಾಡಿರುವರು. ಅನೀತಿಯ ನಡೆ ಸಹೋದರರಲ್ಲಿ ಶುಭರಿದ್ದರೂ ಅಶುಭರಾಗಿದ್ದರೂ ಕಂಡುಬರುವುದು. ಜೀವನದಲ್ಲಿ ಕಷ್ಟಗಳನ್ನುಣ್ಣುವನಾದರೂ ಸಾಮಾಜಿಕದಲ್ಲಿ ಗೌರವಪಾತ್ರನಾಗುವನು. ಸಹೋದರರ ಪೀಳಿಗೆಗೆ ಇದರಿಂದ ಅನಿಷ್ಟದ ಶಾಪವಾಗಿ ಅವರ ಮಕ್ಕಳ ತಲೆಮಾರಿಗೆ ಬರುವಾಗ ಅವರ ಪ್ರಾಯಕಾಲಕ್ಕೆ ಬರುವಾಗ ವೃದ್ಧಾಪ್ಯದಲ್ಲಿ ಬಹುಕ್ಲೇಶಭಾಗಿಗಳಾಗುವುದರೊಂದಿಗೆ ಅನಿಷ್ಟ ರೋಗಪೀಡಿತರಾಗಿ ಹಾಳಾಗುವ ನೆಲೆಯಾಗುವುದು ಕಾಣುವುದು. (ಸಶೇಷ)

——

ಕಾಸರಗೋಡಿನಲ್ಲಿ ಕೊರ್ಪೊರೇಶನ್ ಬ್ಯಾಂಕ್ ಶಾಖೆ

ಕಾಸರಗೋಡು ಶ್ರೀ ರಾಮ ಪೇಟೆಯಲ್ಲಿರುವ ಎಡ್ವೊಕೇಟ್ ಶ್ರೀ| ಜಿ. ಕೆ. ಮಲ್ಯರ ನೂತನ ಕಟ್ಟಡದ "ಅನಂತ ಮಹಲ್"ದಲ್ಲಿ ಕೊರ್ಪೊರೇಶನ್ ಬ್ಯಾಂಕಿನ ನೂತನ ಶಾಖೆಯು (ಇದು ಬ್ಯಾಂಕಿನ 126ನೇ ಶಾಖೆ) ರಾಜ್ಯಸಭಾ ಸದಸ್ಯ ಶ್ರೀ| ಹಮಿದಾಲಿ ಶಮ್ನಾಡ್ ಅವರಿಂದ ಉದ್ಘಾಟಿಸಲ್ಪಟ್ಟಿತು. ನಗರಸಭಾ ಸದಸ್ಯ ಶ್ರೀ| ಕೆ. ಪಿ. ಮಾಧವರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಪ್ರಗತಿಯನ್ನು ವಿವರಿಸಿ ಚೆಯರ್ಮ್ಯಾನ್ ಶ್ರೀ| ಎಂ. ಆರ್. ಕಾಮತರು ಭಾಷಣ ಮಾಡಿದರು. ಪ್ರಾರಂಭದಲ್ಲಿ ಬ್ಯಾಂಕಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ| ಕೆ. ಆರ್. ಕಾರಂತರು ಸ್ವಾಗತಿಸಿ, ಕೊನೆಯಲ್ಲಿ ಶಾಖೆಯ ಮೆನೇಜರ್ ಶ್ರೀ| ಎಸ್. ವಾಸುದೇವ ಪೈಯವರು ಧನ್ಯವಾದ ಅರ್ಪಿಸಿದರು.

ಅಡಿಕೆಯ ಮಾರುಕಟ್ಟೆಗಾಗಿ ಬೃಹತ್ ಸಹಕಾರಿ ಸಂಸ್ಥೆ

ಅಡಿಕೆ ಬೆಲೆ ಕುಸಿತದಿಂದ ಹಾನಿಗೊಂಡ ಬಳಕೆಗಾರರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸುಮಾರು 1ಕೋಟಿ ರೂಪಾಯಿ ಬಂಡವಾಳ ಹಾಕಿ ಕೇರಳ ಮತ್ತು ಮೈಸೂರು ರಾಜ್ಯಗಳು ಸೆಂಟ್ರಲ್ ಎರಕನಟ್ ಮಾರ್ಕೆಟಿಂಗ್ ಮತ್ತು ಪ್ರೋಸೆಸಿಂಗ್ ಕೋ ಅಪರೇಟಿವ್ ಎಂಬ ಜಂಟಿ ಪ್ರಯತ್ನದ ಬೃಹತ್ ಸಹಕಾರೀ ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದು, ಇದು ಮೇ ತಿಂಗಳಲ್ಲೇ ಆರಂಭವಾಗುವುದೆಂದು ತಿಳಿಯಲಾಗಿದೆ.

ಬಂದರ ಯೋಜನೆಗೆ ಕೇಂದ್ರದ ಸಹಾಯ

ಕೇಂದ್ರ ನೌಕಾ ಮತ್ತು ಸಾರಿಗೆ ಖಾತೆಯು ಮಂಗಳೂರು ಬಂದರ ಯೋಜನೆಗೆ 4·26 ಕೋಟಿ ರೂಪಾಯಿಗಳನ್ನು ನೀಡಿದೆಯೆಂದು ಅಧಿಕೃತ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ. ಬಂದರ ನಿರ್ಮಾಣ ಕಾರ್ಯವನ್ನು 1974ರಲ್ಲಿ ಸಂಪೂರ್ಣಗೊಳಿಸುವುದೆಂದೂ ಹೇಳಲಾಗುತ್ತಿದೆ.

—೦—

ಶ್ರೀಮದ್ಭಗವದ್ಗೀತೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ಮೂಲ ಸಂಸ್ಕೃತದಲ್ಲಿ ಮತ್ತು ತುಳುಭಾಷೆಯಲ್ಲಿ)

(ತುಳುಗೀತೆ ರಚಯಿತರು: ದಿ| ಮೂಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್.)

ಏಳನೆಯ ಅಧ್ಯಾಯ—ಜ್ಞಾನವಿಜ್ಞಾನ ಯೋಗ

ಸಂಸ್ಕೃತ

ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ ೭ ॥

ರಸೋಽಹಮಪ್ಸು ಕೌಂತೇಯ ಪ್ರಭಾಽಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥ ೮ ॥

ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥ ೯ ॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಂ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಂ ॥ ೧೦ ॥

ಬಲಂ ಬಲವತಾಮಸ್ಮಿ ಕಾಮರಾಗವಿವರ್ಜಿತಂ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥ ೧೧ ॥

ಯೇ ಚೈವ ಸಾತ್ತ್ವಿಕಾಭಾವಾ ರಾಜಸಾಸ್ತಾಮಸಾಶ್ಚ ಯೇ ।
ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ ॥ ೧೨ ॥

ಏಳನೆ ಅಧ್ಯಾಯ—ಜ್ಞಾನವಿಜ್ಞಾನ ಯೋಗೊ

ತುಳು

ಬೇತೆ ವೊಂಜೆಲ ಎನ್ನ ಮಿತ್ತಾತಿಜ್ಜಿ ಇಜ್ಜಿ, ಧನಂಜಯಾ ।
ಮಾತ ಎನ್ನಾಧಾರ, ನೂಲುಟು ಮುತ್ತುಳೆಂಚನೊ ಅಂಚಯಾ ॥ ೭ ॥

ನೀರ್‌ಲುಟಿ ರಸ, ಚಂದ್ರಸೂರ್ಯೆರೆ ಬೊಳ್ಪು, ವೇದೊಳೆ ಪ್ರಣವನೇ ।
ಶಬ್ದ ಬಾಣೊಟು ಯಾನ್ ಮನುಷ್ಯೆರೆ ಪೌರುಷದೆ ಆತುಪ್ಪನೇ ॥ ೮ ॥

ಶುದ್ಧಪರಿಮಳ ಲೋಕೊಳೆಟ್ ಯಾನ್, ಅಗ್ನಿಟುಪ್ಪುನ ತೇಜಸ್‌ಲ ।
ಸರ್ವಪ್ರಾಣಿಳೆ ಜೀವಶಕ್ತಿದೆ, ಸನ ತಪಸ್ವಿಳೆ ತಾಪಸ್‌ಲ ॥ ೯ ॥

ಸರ್ವಜೀವಿಳೆ ಬೀಜ ಶಾಶ್ವತ ಅಂದ್‌ತೆನ್ನನ್ ಥಿಂದೊಣೂ ।
ಬುದ್ಧಿವಂತೆರೆ ಬುದ್ಧಿ, ತೇಜಸ್ವೀಳೆ ತೇಜಸ್ ಅಂದೊಣೂ ॥ ೧೦ ॥

ಶಕ್ತಿವಂತೆರೆ ಶಕ್ತಿ ಯಾನಾಕಾಮರಾಗವಿವರ್ಜಿತಾ ।
ಪ್ರಾಣಿಲೋಕೊಟು ಕಾಮೆ ಯಾನೇ ಧರ್ಮೊಕತ್ಯನುಕೂಲತಾ ॥ ೧೧ ॥

ಸಾತ್ತ್ವಿಕಲ ರಾಜಸಲ ತಾಮಸಲ ಗುಣ ಮೂಜಲ ಯೆನ್ನೊಟೂ ।
ಸೇರ್‌ತುಪ್ಪುನಿ; ಯಾನ್ ಮೂಜೇಟಲಾ ಇಜ್ಜೀ ಸತ್ಯೊಟೂ ॥ ೧೨ ॥

(ಮುಂದುವರಿಯುವುದು)

ವೃತ್ತಿಪರ ಏಜಂಟ್ ಯೂನಿಟ್ ಉದ್ಘಾಟನೆ

ಜೀವವಿಮಾ ಸಂದೇಶಗಳನ್ನು ಭಾರತದ ಮೂಲೆ ಮೂಲೆಗಳಿಗೆ ಪಸರಿಸಿ ಸಶಿಷ್ಟ ಪ್ರತೀ ಕುಟುಂಬದಲ್ಲಿ ಒಬ್ಬ ಸದಸ್ಯನಿಗಾದರೂ ವಿಮಾ ರಕ್ಷಣೆನೀಡಿ ಜನರಲ್ಲಿ ಉಳಿತಾಯ ಮನೋಪ್ರವೃತ್ತಿಯನ್ನುಂಟು ಮಾಡಲು ನೆರವಾಗುವಂತೆ ಪೂರ್ಣಾವಧಿ ಕೆಲಸಮಾಡುವ ವೃತ್ತಿಪರ ಏಜಂಟ್ ಯೂನಿಟ್‌ಗಳನ್ನು ಪ್ರಮುಖ ನಗರಗಳಲ್ಲಿ ಸ್ಥಾಪಿಸುವ ಜೀವವಿಮಾ ಕಾರ್ಪೋರೇಶನಿನ ಹೊಸ ಕಾರ್ಯಕ್ರಮದಂತೆ ಭಾರತದ ವಿವಿಧ ಭಾಗಗಳಲ್ಲಿ ಸುಮಾರು 16 ವೃತ್ತಿಪರ ಏಜಂಟರನ್ನೊಳಗೊಂಡ 13 ಬೇರೆ ಬೇರೆ ಯೂನಿಟುಗಳು ಸ್ಥಾಪನೆಯಾಗಿದ್ದು, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಾಗು ಉಡುಪಿ ಡಿವಿಜನಿನ ಆಶ್ರಯದಲ್ಲಿ ಅಂತಹ ಪ್ರಥಮ ಯೂನಿಟಿನ ಉದ್ಘಾಟನೆಯು ತಾ. 25ರಂದು ಮಂಗಳೂರು ಮೋತಿಮಹಲಿನಲ್ಲಿ ಜರಗಿದ ಸಮಾರಂಭದಲ್ಲಿ ಜೀವವಿಮಾ ಕಾರ್ಪೋರೇಶನಿನ ಮಂಗಳೂರು ಶಾಖೆಯ ಆಶ್ರಯದಲ್ಲಿ ಮಂಗಳೂರು ನಗರಸಭಾಪತಿ ಶ್ರೀ| ಬ್ಲೇಸಿಯಸ್ ಡಿ'ಸೋಜರಿಂದ ನಡೆಯಿತು. ಆರಂಭದಲ್ಲಿ ಯೂನಿಟಿಗೆ ಸಂಬಂಧಪಟ್ಟ ಹನ್ನೊಂದು ಮಂದಿ ಏಜಂಟರಲ್ಲಿ ಒಬ್ಬರಾದ ಶ್ರೀ| ಶಿವಾನಂದ ಭಟ್‌ರವರಿಂದ ಪ್ರಾರ್ಥನೆ, ಮಂಗಳೂರು ಎಲ್. ಐ. ಸಿ. ಶಾಖಾಧಿಕಾರಿ ಶ್ರೀ| ಎಂ. ಎಸ್. ಶೆಟ್ಟಿಯವರಿಂದ ಸ್ವಾಗತವಾದ ಮೇಲೆ, ಸಹ ಶಾಖಾಧಿಕಾರಿ ಹಾಗು ಏಜಂಟರನ್ನು ತರಬೇತಿಗೊಳಿಸುವ ಶ್ರೀ| ಕೆ. ಈಶ್ವರ ಶೆಟ್ಟಿಯವರು ಯೂನಿಟಿಗೆ ಸೇರಿದ ಏಜಂಟರ ಪರಿಚಯ ಮಾಡಿಕೊಟ್ಟರು. ಉಡುಪಿ ಡಿವಿಜನಿನ ಎಸಿಸ್ಟಾಂಟ್ ಡಿವಿಜನಲ್ ಮೆನೇಜರ ಶ್ರೀ| ಟಿ. ಪಿ. ಎಸ್. ನಂಬಿಯಾರರು ಕಳೆದ ಮೂರು ವರ್ಷಗಳಲ್ಲಾದ ಕ್ಷಿಪ್ರಗತಿಯ ವಿಮಾ ಅಭಿವೃದ್ಧಿಯನ್ನು ಅಂಕಿ ಸಂಖ್ಯೆಗಳಿಂದ ವಿವರಿಸಿದ ಮೇಲೆ ಮುಖ್ಯ ಅತಿಥಿ ಶ್ರೀ| ಬ್ಲೇಸಿಯಸ್ ಡಿ'ಸೋಜರು ಯೂನಿಟನ್ನು ಉದ್ಘಾಟಿಸಿ, ಮಂಗಳೂರಲ್ಲಿ ಅದನ್ನು ಆರಂಭಿಸಿದ ಬಗ್ಗೆ ಸಂತೋಷವ್ಯಕ್ತಪಡಿಸಿ, ಶುಭ ಕೋರಿದರು. 'ಸಭಾಧ್ಯಕ್ಷತೆ ವಹಿಸಿದ್ದ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ| ವಿ. ಕೆ. ಶ್ರೀನಿವಾಸನ್‌ರವರು ನೂತನ ಯೋಜನೆಯ ರೂಪರೇಖೆಗಳನ್ನು ವಿವರಿಸಿ ನಿರುದ್ಯೋಗದಲ್ಲಿರುವ ಶಿಕ್ಷಿತ ಯುವಕರಿಗೆ ಸ್ವಂತ ಉದ್ಯೋಗದೊಡನೆ ಉತ್ತಮ ಭವಿಷ್ಯ ಕಲ್ಪಿಸುವ ಯೋಜನೆಯೂ ಇದಾಗಿದೆಯೆಂದರು. ಕೊನೆಯಲ್ಲಿ ಮಂಗಳೂರು ಶಾಖೆಯ ಸಹ ಶಾಖಾಧಿಕಾರಿ ಶ್ರೀ| ಬಿ. ಬಾಬುರಾವ್ ಅವರು ಧನ್ಯವಾದಗಳನ್ನರ್ಪಿಸಿದರು.

ವಾಹನ ಓಡಾಟ ನಿಯಂತ್ರಣ ಯೋಜನೆ

ಮಂಗಳೂರು ನಗರ, ಅದರಲ್ಲೂ ಪ್ರಮುಖ ಕೇಂದ್ರ ಸ್ಥಳವಾದ ಹಂಪನಕಟ್ಟೆ ಪ್ರದೇಶದಲ್ಲಿ ವಾಹನಗಳ ಓಡಾಟವನ್ನು ನಿಯಂತ್ರಿಸಿ, ಕ್ರಮಬದ್ಧಗೊಳಿಸುವ ಕುರಿತು ಯೋಜನೆಯೊಂದು ಸಿದ್ಧವಾಗಿದ್ದು, ಈ ಸಂಬಂಧ ಶೀಘ್ರವೇ "ವನ್ ವೇ" "ನೋ ಎಂಟ್ರಿ" "ಪಾರ್ಕಿಂಗ್" ಸೂಚನೆ

ಇತ್ಯಾದಿ ವಿವರಣೆಗಳನ್ನೊಳಗೊಂಡ ಪ್ರಕಟಣೆಯೊಂದನ್ನು ಹೊರಡಿಸಲಾಗುವುದೆಂದು ದ. ಕ. ಜಿಲ್ಲಾಧಿಕಾರಿ ಶ್ರೀ| ಎಂ. ಬಿ. ಪ್ರಕಾಶ್‌ರವರು ಕಳೆದ ತಾ. 25ರಂದು ಕದ್ರಿ ಸೇವಾ ಮಂದಿರದಲ್ಲಿ ನಡೆದ ಮಂಗಳೂರು ಲಾಯನ್ಸ್ ಕ್ಲಬ್ಬಿನ ಪಾಕ್ಷಿಕ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಷಣ ಮಾಡುವ ಕಾಲಕ್ಕೆ ತಿಳಿಸಿದರು.

ಸಾಮೂಹಿಕ ಬ್ರಹ್ಮೋಪದೇಶ

ಕಾಶೀ ಮಠಾಧೀಶ ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಆದೇಶದಂತೆ ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಗೌಡಸಾರಸ್ವತ ಬ್ರಾಹ್ಮಣ ಬಾಲಕರ (ಉಪನಯನವಾಗದೇ ಬಾಕಿ ಇರುವ ಯಾವುದೇ ಪ್ರಾಯದ) ಸಾಮೂಹಿಕ ಬ್ರಹ್ಮೋಪದೇಶ ಕಾರ್ಯಕ್ರಮವನ್ನು ಮೇತಿಂಗಳಲ್ಲಿ ನಡೆಸುವುದೆಂದು ನಿರ್ಣಯಿಸಲಾಗಿದೆ. ಉಪನಯನವಾಗುವ ವಟುವಿನ ಜಾತಕ ಮತ್ತು ವಿಳಾಸವನ್ನು ವೇದಮೂರ್ತಿ ಶ್ರೀ ರಾಮ ಭಟ್, ಶ್ರೀ| ಎಂ. ಜಿ. ಅನಂತ ಪೈ, ಶ್ರೀ| ಎಸ್. ಸಿ. ನಾಯಕ್, ಶ್ರೀ| ಕಸ್ತೂರಿ ವೈಕುಂಠ ಪೈ, ಶ್ರೀ| ಬಿ. ಎನ್. ಬಾಳಿಗ ಇವರ ಪೈಕಿ ಯಾರಾದರೊಬ್ಬರಿಗೆ ತಲುಪಿಸಲು ವಿನಂತಿಸಲಾಗಿದೆ.

ಜಿಲ್ಲೆಯ ಶೇಂದಿ ಮತ್ತು ಶರಾಬು ಅಂಗಡಿಗಳ ಹರಾಜು

ಮೈಸೂರು ರಾಜ್ಯದ ಅಬ್ಕಾರಿ ಕಮಿಶನರರ ಪ್ರಕಟಣೆಯನ್ವಯ ದಕ್ಷಿಣಕನ್ನಡ ಜಿಲ್ಲೆಯಲ್ಲಿನ 536 ಶೇಂದಿ ಮತ್ತು 184 ಶರಾಬು ಅಂಗಡಿಗಳ ಹರಾಜನ್ನು ದ. ಕ. ಜಿಲ್ಲಾಧಿಕಾರಿಯವರು ತಮ್ಮ ಕಚೇರಿಯ ಆವರಣದಲ್ಲಿ ಮುಂದಿನವಾರ ನಡೆಸಲಿದ್ದಾರೆ. ಹರಾಜು ತಾ. 4-5-1973 ನೇ ಬೆಳಗ್ಗೆ ಗಂಟೆ 10-30ಕ್ಕೆ ಪ್ರಾರಂಭವಾಗಿ ಜಿಲ್ಲೆಯ ಎಲ್ಲಾ ಅಂಗಡಿಗಳ ಹರಾಜು ಮುಗಿಯುವ ತನಕ ನಡೆಯಲಿದೆ. ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಮುಂಗಡವಾಗಿ ಠೇವಣಾತಿಯನ್ನು ಜಿಲ್ಲಾ ಅಬ್ಕಾರಿ ಆಫೀಸರರ ಕಚೇರಿಯಲ್ಲಿ ಮೇ ತಾ. 1 ರಿಂದ ಕಚೇರಿಯ ಸಮಯದಲ್ಲಿ ಜಮಾ ಮಾಡಬಹುದೆಂದು ಸೂಚಿಸಲಾಗಿದೆ.

ಮೂಲ್ಕಿ ಸೀಮೆ ಅರಸರ ನಿಧನ

ಸುಮಾರು 30 ವರ್ಷಗಳ ಕಾಲ ಮೂಲ್ಕಿ ಸೀಮೆ ಅರಸರಾಗಿದ್ದ ಮೂಲ್ಕಿ ಅರಮನೆ ಶ್ರೀ| ಚೆನ್ನರಾಯ ಸಾವಂತರು ತಾ. 22ರಂದು ಪಡು ಪಣಂಬೂರಿನಲ್ಲಿ ದೈವಾಧೀನರಾದರು. ಶ್ರೀಯುತರು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮೊಕ್ತೇಸರರಾಗಿದ್ದರು. ಮುಲ್ಕಿ ಸಹಕಾರಿ ಬೇಂಕಿನ ಕೋಶಾಧಿಕಾರಿಗಳಾಗಿದ್ದರು. ಪರಂಪರೆಯಿಂದ ನಡೆದುಬಂದಿರುವ ಪದ್ಧತಿಯಂತೆ ವ್ಯಾತರೆ ಸಹೋದರರಾದ ಶ್ರೀ| ಎಂ. ಜಗತ್ಪಾಲಯ್ಯನವರು ಸಮಸ್ತ ಸೀಮೆಯವರ ಮತ್ತು ಊರವರ ಸಮಕ್ಷಮದಲ್ಲಿ "ದುಗ್ಗಣ ಸಾವಂತರು" ಎಂಬ ಅಭಿನಾಮದೊಂದಿಗೆ ಪಟ್ಟವನ್ನಲಂಕರಿಸಿದರು.


ರೋಟರಿ ಗವರ್ನರ ಡಾ| ಅಡಪ್ಪರವರ ಅಧಿಕೃತ ಸಂದರ್ಶನ

"ಸಾರ್ವಜನಿಕ ಸಂಪರ್ಕವು ಅತಿ ಮುಖ್ಯ. ಸರಕಾರ ಮತ್ತು ಜನತೆಗಳೊಳಗಣ ಸಂಪರ್ಕದ ಅಂತರವು ಹೆಚ್ಚುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರೋಟರಿಯನರು ಈ ಅಂತರವನ್ನು ಕಡಿಮೆಮಾಡಲು ಯತ್ನಿಸಬೇಕಾಗಿದೆ"

—ಎಂದು, ರೋಟರಿ ಜಿಲ್ಲಾ 318ರ ಗವರ್ನರ ಡಾ| ಎಮ್. ದೇವದಾಸ ಅಡಪ್ಪರವರು, ಮಂಗಳೂರು ರೋಟರಿಗೆ ತಾ. 26ನೇ ಗುರುವಾರ ಅಧಿಕೃತ ಸಂದರ್ಶನವಿತ್ತ ವೇಳೆ, ಒತ್ತಿ ಹೇಳಿದರು. ಆಂಧ್ರಕ್ಕೆ ಸಂದರ್ಶನವಿತ್ತಾಗ ಒಂದು ಆಸ್ಪತ್ರೆಯಲ್ಲಿನ ದುಸ್ಥಿತಿಯನ್ನು ಕಂಡುದನ್ನು ವಿವರಿಸಿ ಡಾ| ಅಡಪ್ಪರವರು, ಅಧಿಕಾರಿಗಳೆಂಬವರಿಗೆ, ಆಳುವವರಿಗೆ—ಜನತಾಸಂಪರ್ಕವಿಲ್ಲದೆ ಹಲವು ಸತ್ಕಾರ್ಯಗಳು ಅಪೂರ್ಣವಾಗಿ ಉಳಿಯುತ್ತವೆ, ಕರ್ತವ್ಯಲೋಪವಾಗುತ್ತದೆ ಎಂದರು. ಒಂದೇ ವ್ಯಕ್ತಿಯು ಏನನ್ನೆಲ್ಲ ಸಾಧಿಸಬಹುದೆಂಬುದನ್ನು ಡಾ| ಅಡಪ್ಪರವರು ಹೇಳುತ್ತ, ಮಲ್ಲಾಡಿಹಳ್ಳಿಯ ಸ್ವಾಮೀಜಿಯವರು ಕಟ್ಟಿ ತಂದ ಸಂಸ್ಥೆಗಳ ವಿಷಯವಾಗಿ ಪ್ರಸ್ತಾವಿಸಿ, ಆ ಸ್ವಾಮೀಜಿಯವರು ಸದಾ ಜನತಾಸಂಪರ್ಕದಲ್ಲಿದ್ದು, ಜನಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ಸ್ಪಷ್ಟವಾಗಿ ಕಂಡು, ತಮ್ಮ ಸೇವೆಯನ್ನು ಪರಿಣಾಮಕಾರಿಯಾಗಿ ನೀಡುವಂತಾಗಿದೆ-ಎಂದರು. ಡಾ| ಅಡಪ್ಪರು ತಮ್ಮ ಅಮೆರಿಕಾಸಂದರ್ಶನದ ಅನುಭವಗಳನ್ನು [illegible]ಯಾವ ವಿಲಂಬಗಳೂ [illegible]ತ್ತಾಗಿ ಆಸ್ಪತ್ರೆಗೆ ಪ್ರವೇಶಹೊಂದಿದುದನ್ನೂ ವಿವರಿಸಿದರು, ಮತ್ತು ಭಾರತದಲ್ಲಿ ಪ್ರೇಮಾದರಗಳ ಆತಿಥ್ಯಪಡೆದ ವಿದೇಶೀಯರು ತಮ್ಮಲ್ಲಿಗೆ ಬಂದ ಭಾರತೀಯರನ್ನೂ ಆತ್ಮೀಯತೆಯಿಂದ ಕಂಡ ದೃಷ್ಟಾಂತಗಳನ್ನು ಹೇಳಿದರು. ತಾನು ಈ ವರೆಗೆ ಸಂದರ್ಶಿಸಿದ ರೋಟರಿ ಕ್ಲಬ್ಬುಗಳಲ್ಲೆಲ್ಲ ಮಂಗಳೂರು ರೋಟರಿ ಕ್ಲಬ್ಬಿನ ವಿಷಯವಾಗಿ ಅತ್ಯುತ್ತಮ ಸದಭಿಪ್ರಾಯವಿದ್ದುದು ಕಂಡುಕೊಂಡೆನಾಗಿಯೂ ಡಾ| ಅಡಪ್ಪರವರು ಹೇಳಿದರು.

'ಮೋತಿಮಹಲ್'ನ ವಿಶಾಲ ಸಭಾಂಗಣದಲ್ಲಿ ನೆರೆದ ಈ ಸಮಾರಂಭದ ಅಧ್ಯಕ್ಷತೆಯನ್ನು ರೋಟರಿ ಅಧ್ಯಕ್ಷ ಶ್ರೀ| ಎಂ. ಆರ್. ಪ್ರಭುಗಳವರು ವಹಿಸಿದ್ದರು. ಮಾಜಿ ರೋಟರಿ ಗವರ್ನರ ಗವರ್ನರ ಡಾ| ಕೆ. ಪಿ. ಗಣೇಶನ್‌ರವರಿಂದ ಪ್ರಾರ್ಥನೆಯಾದ ನಂತರ, ಅಧ್ಯಕ್ಷರು ಸ್ವಾಗತಿಸಿದರು. ಡಾ| ಕೆ. ಪಿ. ಗಣೇಶನ್, ಶ್ರೀ| ಎಮ್. ಎ. ರಾಮಚಂದ್ರರಾವ್ ಮತ್ತು ಸೇವಗೂರು ರಾಮಚಂದ್ರ, ಕಾಮತರವರಿಗೆ ಜನ್ಮದಿನದ ಶುಭಾಶಯಗಳನ್ನೂ, ಡಾ| ಪಿ. ಎನ್. ಅರಿಗ ಮತ್ತು ಶ್ರೀ| ಎಂ. ಎಸ್. ರಾಮಮೋಹನರವರಿಗೆ ವಿವಾಹವರ್ಧಂತಿಯ ಶುಭಾಶಯಗಳನ್ನೂ ಕೋರಲಾಯಿತು. ಕಾರ್ಯದರ್ಶಿ ಶ್ರೀ| ಕೆ. ರಾಮಮೋಹನರಾವ್‌ರವರು ಕಳೆದ 10 ತಿಂಗಳ ಕಾರ್ಯಕಲಾಪಗಳ ವರದಿಯೊಪ್ಪಿಸುತ್ತ ವರ್ಷಾರಂಭದಲ್ಲಿ 77 ಮಂದಿ ಸದಸ್ಯರಿದ್ದ ಮಂಗಳೂರು ರೋಟರಿ ಕ್ಲಬ್ಬು ಇಂದು 88 ಮಂದಿಯನ್ನು ಹೊಂದಿದೆಯೆಂದೂ ಹೇಳಿದರು. ಶ್ರೀ| ಪೀಟರ್ ಜೆ. ಪ್ರಭು ಮತ್ತು ಚಿಂತರಂಜನದಾಸ-ಇವರಿಬ್ಬರಿಗೆ ಸದಸ್ಯತನದ ದೀಕ್ಷೆಕೊಡಲಾಯಿತು. ಅಧ್ಯಕ್ಷರು ಡಾ| ಅಡಪ್ಪರವರನ್ನು ಸಭೆಗೆ ಪರಿಚಯಮಾಡಿಕೊಡುತ್ತ, ಗವರ್ನರಪದ ಸ್ವೀಕಾರದ ನಂತರ ಮೂರು ತಿಂಗಳ ಕಾಲವನ್ನು ಅಸ್ವಸ್ಥದಲ್ಲಿ ಕಳೆದರೂ ಡಾ| ಅಡಪ್ಪರವರು ಕಳೆದ ಆರು ತಿಂಗಳೊಳಗೆ ರೋಟರಿ ಜಿಲಾ 318ರ 63 ಕ್ಲಬ್ಬುಗಳಿಗೆ ಸಂದರ್ಶನವಿತ್ತು, ಇಂದು 64ನೆಯದಾಗಿ ಮಂಗಳೂರು ಕ್ಲಬ್ಬನ್ನು ಸಂದರ್ಶಿಸುತ್ತಿರುವುದಾಗಿ ನುಡಿದರು. ಕೊನೆಗೆ, ಡಾ| ಸಿ. ಆರ್. ಕಾಮತರು ಧನ್ಯವಾದಗಳನ್ನಿತ್ತರು.

—o—



ಸದಸ್ಯರಾಗಿಯೂ ಕಾರ್ಯದರ್ಶಿಯಾಗಿಯೂ ಬಹುವರ್ಷಗಳ ಸೇವೆಸಲಿಸಿದ ದಿ| ಶ್ರೀ| ಕೊಂಚಾಡಿ ಕೇಶವ ಶೆಣೈಯವರು.



ಕಳೆದ 10 ವರ್ಷಗಳಿಂದ ಕಾರ್ಯಕಾರಿ ಸಮಿತಿಯಲ್ಲಿದ್ದು, ಎರಡು ವರ್ಷಗಳಿಂದ ಕಾರ್ಯದರ್ಶಿಯಾಗಿ ನಿರ್ವಹಿಸುತ್ತಿರುವ ಶ್ರೀ| ಕಲ್ಬಾವಿ ವೆಂಕಟರಾವ್‌ರವರು.



ಕೋಶಾಧಿಕಾರಿಯಾಗಿ ನಿರ್ವಹಿಸುತ್ತಿರುವ ಶ್ರೀ| ಕೊಂಚಾಡಿ ರಮಾನಾಥ ಶೆಣೈಯವರು.

(1ನೇ ಪುಟದಿಂದ)

ಎಡ್ವೊಕೇಟ್ ಅಡಿಗೆ ವರದರಾವ್, ದಿ| ಸಾಹುಕಾರ ಗಣೇಶ ಶ್ರೀನಿವಾಸ ಪೈ, ದಿ| ಕೊಂಚಾಡಿ ಕೇಶವ ಶೆಣೈ, ದಿ| ಎಚ್. ಲಕ್ಷ್ಮೀನಾರಾಯಣ ಕಾಮತ್, ದೇಶಭಕ್ತ ಕಾರ್ನಾಡು ಸದಾಶಿವ ರಾವ್, ದಿ| ಬೋಳ ಮಾಧವರಾವ್, ಉಪ್ಪಿನಂಗಡಿಯ ದಿ| ವೈಕುಂಠ ಭಟ್ಟ, ದಿ| ಬಿ. ವೈಕುಂಠಬಾಳಿಗ...... ಮೊದಲಾದವರು ಅಧ್ಯಕ್ಷರಾಗಿಯೋ ಕಾರ್ಯದರ್ಶಿ ಅಥವಾ ಕಾರ್ಯಕಾರೀ ಮಂಡಳಿ ಸದಸ್ಯರಾಗಿಯೋ ಇದ್ದು, ಮಾರ್ಗದರ್ಶಕರಾಗಲು. ಆರಂಭದಿಂದಲೇ ಪ್ರಮುಖ [illegible] ಗೋಪಾಲಾಚಾರ್ಯರು 39 ವರ್ಷಗಳ ಕಾಲ ಎಡೆಬಿಡದೆ ಸೇವೆಸಲಿಸಿದರು. ಶ್ರೀ| ಪೊಳ್ತಿಲ್ ನರಸಿಂಹ ಪೈಯವರು ಔಷಧಿ ವಿಭಾಗದ ಪ್ರಮುಖರಾಗಿ 47 ವರ್ಷಗಳ ಸೇವೆ ಸಲಿಸಿದರು. ಇವರಿಬ್ಬರು ಮಹನೀಯರ ಸೇವಾದಾಖಲೆ ದೊಡ್ಡದು; ಅವರೂ ಭಗವಾನ್ ರಾಮಕೃಷ್ಣ ಪರಮಹಂಸರಿಂದಲೇ ಪ್ರೇರಿತರಾಗಿ ಈ ಸಂಸ್ಥೆಯಲ್ಲಿ ಅಷ್ಟು ಕಾಲವೂ ಶ್ರಮಿಸಿ, ಹಲವರಿಗೆ ಮಾರ್ಗದರ್ಶಿಗಳಾದರು.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮವು ಪ್ರಸಿದ್ಧಿಯ ಲವಲೇಶ ಇಚ್ಛೆಯಿಲ್ಲದೆ ಮೌನ ಸೇವೆ ಸಲಿಸಿದ ಮಹಾಸಂಸ್ಥೆ. ಇಷ್ಟು ಪರಿಶುದ್ಧ ಸೇವಾದಾಖಲೆ ಬಹು ವಿರಲ. ಈ ಮುಖ್ಯ ಅಂಶವನ್ನು, ತಾ. 22ರಂದು ಜರಗಿದ ಸ್ವರ್ಣೋತ್ಸವ ಕಾಲದಲ್ಲಿ, ವೈದ್ಯಾಶ್ರಮದ ನೂತನ "ಪಾಕಶಾಲೆ"ಯನ್ನು ತೆರೆದ ಮಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ವಿಜ್ಞಾನಂದಜೀಯವರೂ, ಸ್ವರ್ಣೋತ್ಸವ ಸ್ಮರಣಸಂಚಿಕೆಯನ್ನು ಉದ್ಘಾಟಿಸಿದ ಮಾಜಿ ನಗರಸಭಾಪತಿ ಶ್ರೀ| ವಾಮನ ಕೊಡಿಯಾಲಬೈಲ್‌ರವರೂ ಅಧ್ಯಕ್ಷತೆ ವಹಿಸಿದ ಡಾ| ಎಮ್. ಸಿ. ಶಾಸ್ತ್ರಿಗಳವರೂ ಎತ್ತಿ ಹೇಳಿದರು.

ಆರಂಭದಲ್ಲಿ, ಶ್ರೀ ರಾಮಕೃಷ್ಣ ವೈದ್ಯಾಶ್ರಮದ ಈಗಿನ ಅಧ್ಯಕ್ಷರಾಗಿರುವ ಶ್ರೀ| ಕೆ. ದೇವದಾಸನಾಯ್ಕ-ವಕೀಲ ಅವರು ಸ್ವಾಗತಿಸಿದ ಮೇಲೆ, ಕಾರ್ಯದರ್ಶಿ ಶ್ರೀ| ಕಲ್ಬಾವಿ ವೆಂಕಟರಾವ್‌ರವರು ಸಂಸ್ಥೆಯ ಅರ್ಧಶತಮಾನದ ಇತಿಹಾಸವನ್ನೋದಿದರು. ವೈದ್ಯಾಶ್ರಮ ಸಂಘದ ಕಾರ್ಯಕಾರಿ ಮಂಡಲಿಯ ಸದಸ್ಯರಲ್ಲೊಬ್ಬರಾಗಿರುವ ವೈದ್ಯ ಶ್ರೀ| ಮಿಜಾರು ನಾರಾಯಣ ಪೈ, B. Sc., ಆಯುರ್ವೇದ ಭಿಷಕ್ ಅವರು ಸ್ವರ್ಣೋತ್ಸವಕ್ಕೆ ಯಶಸ್ಸುಕೋರಿ ಬಂದ ಸಂದೇಶಗಳನ್ನೋದಿದರು. ಸ್ವಾಮಿ ವಿಜ್ಞಾನಂದಜಿಯವರು ಭಾಷಣಮಾಡುತ್ತ, ಜಗತ್ತಿನಲ್ಲಿ ಆಯುರ್ವೇದ ಚಿಕಿತ್ಸಾಪದ್ಧತಿಯು ಅತೀ ಪುರಾತನಕಾಲದಿಂದ ಬಂದುದೆಂದೂ, ದೈಹಿಕ ಮತ್ತು ಮಾನಸಿಕ ರೋಗಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನಡೆಸುತಿದ್ದರೆಂದೂ ಹೇಳಿ, ಭಾರತೀಯರಿಗೇ ಆಯುರ್ವೇದದಲ್ಲಿ ವಿಶ್ವಾಸ ಕಡಿಮೆಯಾಗಿ ಈ ಚಿಕಿತ್ಸಾಪದ್ಧತಿಯು ಅವನತಿಸ್ಥಿತಿಯಲ್ಲಿದೆ; ಬಲ್ಲವರು ಈ ಪತನವನ್ನು ತಡೆದು, ಪ್ರಚುರಗೊಳಿಸಬೇಕು, ಸದಾ ಸಂಶೋಧನೆಗಳಾಗಬೇಕು ಎಂದರು. ನಿಸ್ವಾರ್ಥಸೇವೆ ಮತ್ತು ತ್ಯಾಗಗಳಿಂದ ಕಟ್ಟಿತಂದ ಈ ಸಂಸ್ಥೆಯ ಭವಿಷ್ಯವು ಉಜ್ವಲವಾಗಲೆಂದೂ ಸ್ವಾಮೀಜಿ ಹಾರೈಸಿದರು.

ಶ್ರೀ| ವಾಮನ ಕೊಡಿಯಾಲಬೈಲರವರು ಸ್ಮರಣಸಂಚಿಕೆಯನ್ನುದ್ಘಾಟಿಸುತ್ತ, ಆಯುರ್ವೇದ ಚಿಕಿತ್ಸಾಪದ್ಧತಿಯು ಜನತೆಯಿಂದಲೂ ಅಲಕ್ಷಿಸಲ್ಪಟ್ಟಿದೆ, ಸರಕಾರದಿಂದಲೂ ಅಲಕ್ಷಿಸಲ್ಪಟ್ಟಿದೆ ಎಂದೂ, ಆಯುರ್ವೇದ ಪ್ರಚಾರಕ್ಕಾಗಿ ಶ್ರಮಿಸುವವರಿನ್ನಲಾದವರೇ ತಮ್ಮೊಳಗೆ ಐಕ್ಯವಿಲ್ಲದವರಾಗಿರುವರೆಂದೂ ಮುಂತಾಗಿ ಟೀಕಿಸಿದರು. ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು, ವೈದ್ಯಾಶ್ರಮ ಸಂಘದ ಕಾರ್ಯದರ್ಶಿಗಳಾಗಿ ಹಲವು ವರ್ಷ ದುಡಿದ ಅತ್ಯಂತ ಪ್ರಾಮಾಣಿಕ ಕಾರ್ಯಕರ್ತ ದಿ| ಕೊಂಚಾಡಿ ಕೇಶವ ಶೆಣೈ ಮತ್ತು ಜತೆಕಾರ್ಯದರ್ಶಿಯಾಗಿ ದುಡಿದ ದಿ| ಎಂ. ವೆಂಕಟರಮಣ ಪೈಯವರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು. ಡಾ| ಪಿ. ಎನ್. ಉಪಾಧ್ಯಾಯ, ಡಾ| ಐ. ಕೆ. ಪಿ. ಶರ್ಮ ಮತ್ತು ಶ್ರೀ| ಎಸ್. ಮುಕುಂದರಾವ್-ಮಾಜಿ ಎಂ. ಎಲ್. ಸಿ. ಅವರೂ, ಆಯುರ್ವೇದ ಹಾಗೂ ಧರ್ಮವೈದ್ಯಾಶ್ರಮದ ಕುರಿತಾಗಿ ಭಾಷಣಗಳನ್ನಿತ್ತರು.

ಅಧ್ಯಕ್ಷಭಾಷಣಮಾಡುತ್ತ ಡಾ| ಎಂ. ಸಿ. ಶಾಸ್ತ್ರಿಯವರು, ಮುಸ್ಲಿಂ ಆಳ್ವಿಕೆ ಈ ದೇಶದಲ್ಲಿ ಆರಂಭವಾದಾಗ ಮುಸ್ಲಿಂ ಅರಸರು ತಮ್ಮದೇ ಆದ ಯೂನಾನಿ ಪದ್ಧತಿಯನ್ನು ತಂದು ಹೇರಿ, ಯುನಾನಿಗೇ ಪ್ರಾಶಸ್ತ್ಯ ನೀಡಿ ಜನಪ್ರಿಯಗೊಳಿಸಲೆತ್ನಿಸಿ, ಆಯುರ್ವೇದದ ಪ್ರಗತಿ ಕುಂಠಿತವಾಯಿತೆಂದೂ, ಆ ಮೇಲೆ ಬ್ರಿಟಿಷರ ಆಡಳಿತದಲ್ಲಿ ಎಲೋಪತಿಗೇ ಪ್ರಾಶಸ್ತ್ಯ ನೀಡಿದ ಫಲವಾಗಿ ಆಯುರ್ವೇದವು ಮತ್ತಿಷ್ಟು ಹಿನ್ನೆಲೆಗೆ ಹೋಗುವಂತಾಯಿತೆಂದೂ, ಈಗ ಸ್ವಾತಂತ್ರ್ಯ ಬಂದು 25 ವರ್ಷಗಳು ಕಳೆದರೂ ನಮ್ಮದೇ ಆದ ಸರಕಾರವು ಇನ್ನಿಷ್ಟು ಕಠಿನ ಧೋರಣೆ ವಹಿಸಿ, ಆಯುರ್ವೇದದ ಮೇಲೆ ಅಲ್ಲಸಲ್ಲದ ಕಾಯಿದೆಗಳನ್ನು ಹೇರಿ, ಉನ್ನತಿಗಾಗಿ ನೆರವಾಗುವುದನ್ನು ಬಿಟ್ಟು, ತೀರ ಅಸಹಕಾರ ತೋರುತ್ತಿದೆಯೆಂದೂ, ಎಮ್. ಎಲ್. ಎ.ಗಳಾಗಿ ಹೋದ ನಮ್ಮ ಜಿಲ್ಲೆಯ ಪ್ರತಿನಿಧಿಗಳಿಂದಲೂ ಆಯುರ್ವೇದಕ್ಕೆ ಸರಕಾರದ ಸಹಕಾರ-ಸಹಾಯಗಳು ಸಿಗುವಲ್ಲಿ ಯಾವ ನೆರವೂ ದೊರೆಯಲಿಲ್ಲವೆಂದೂ, ಬೆಂಗಳೂರಿಗೆ ಹೋಗಿ ತಾನೊಮ್ಮೆ ಆಗಿನ ಮುಖ್ಯಮಂತ್ರಿ ಶ್ರೀ| ನಿಜಲಿಂಗಪ್ಪನವರನ್ನೆದುರಾದಾಗ "ನೀವು ಸಹಾಯಮಾಡದಿದ್ದರೆ ಚಿಂತೆಯಿಲ್ಲ, ತೊಂದರೆ ಮಾತ್ರ ಕೊಡಬೇಡಿ" ಎಂದು ಹೇಳಿದೆನೆಂದೂ ನುಡಿಯುತ್ತ, ನಮ್ಮ ದೊಡ್ಡ ಕೊಡುಗೆಯಾಗಿರುವ ಈ ಆಯುರ್ವೇದಕ್ಕೂ ಭಾರತೀಯ ಸಂಸ್ಕೃತಿಗೂ ಎಂದೆಂದಿಗೂ ನಾಶವಿಲ್ಲ—ಎಂದರು.

ಸಮಾರಂಭಾಂತ್ಯದಲ್ಲಿ ಶ್ರೀ| ಸಿ. ಜಿ. ಕಾಮತರವರು ಧನ್ಯವಾದಗಳನ್ನಿತ್ತರು.

—೦—

ನೊರ್ತ್ ರೋಟರಿ ಕ್ಲಬ್ಬಿನಲ್ಲಿ ಶ್ರೀ| ಯು. ಎಸ್. ಕೃಷ್ಣರಾಯರಿಗೆ ಸನ್ಮಾನ

ಮಂಗಳೂರು ನೊರ್ತ್ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 24ರಂದು ಸಂಜೆ ಮೋತಿಮಹಲಿನಲ್ಲಿ ರೊಟೆರಿಯನ್ ಎಂ. ಅಚ್ಯುತ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ರಾಜ್ಯಪ್ರಶಸ್ತಿ ವಿಜೇತ ಅಧ್ಯಾಪಕ ಹಾಗು ಕದ್ರಿ ನೃತ್ಯ ವಿದ್ಯಾನಿಲಯದ ನಿರ್ದೇಶಕ ಶ್ರೀ| ಯು. ಎಸ್. ಕೃಷ್ಣರಾಯರನ್ನು ಸನ್ಮಾನಿಸಲಾಯಿತು. ಆರಂಭದಲ್ಲಿ ರೊಟೇರಿಯನ್ ಬಿ. ವಾಮನ ಪದ್ಮನಾಭ ಬಾಳಿಗರಿಂದ ಪ್ರಾರ್ಥನೆ, ಅಧ್ಯಕ್ಷರಿಂದ ಸ್ವಾಗತ, ಕಾರ್ಯದರ್ಶಿಯವರಿಂದ ಪ್ರಕಟಣೆಗಳಾದ ಮೇಲೆ ರೊಟೇರಿಯನ್ ಶ್ರೀ| ಕೆ. ಆರ್. ಕಾರಂತರು ಮುಖ್ಯ ಅತಿಥಿಯವರ ಪರಿಚಯ ಮಾಡಿಕೊಟ್ಟರು. ಶ್ರೀ| ಯು. ಎಸ್. ಕೃಷ್ಣರಾಯರು ತನಗಿತ್ತ ಸನ್ಮಾನಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸುತ್ತ, "ಇದು ನನಗೆ ವೈಯಕ್ತಿಕವಾಗಿ ಸಲ್ಲಿಸಿದ ಗೌರವವಲ್ಲ, ಅಧ್ಯಾಪಕ ವೃತ್ತಿಗೆನೇ ನೀಡಿದ ಸನ್ಮಾನ. ಗುರುಬ್ರಹ್ಮಾ, ಗುರುವಿಷ್ಣು, ಗುರುದೇವೊ ಮಹೇಶ್ವರಾ....ಎನ್ನುವ ಶ್ಲೋಕದಲ್ಲಿರುವಂತೆ ಒಂದು ಕಾಲದಲ್ಲಿ ಅಧ್ಯಾಪಕನಿಗೆ ಸಮಾಜದಲ್ಲಿ ಅತ್ಯಂತ ಹಿರಿಯ ಸ್ಥಾನವಿತ್ತು. ಆ ಕಾಲದ ಅಧ್ಯಾಪಕರು ಅತ್ಯಂತ ನಿಷ್ಠೆಯಿಂದ ಆ ವೃತ್ತಿಯನ್ನು ಪಾಲಿಸಿಕೊಂಡಿದ್ದರು. ರೋಟರಿಯಂತಹ ಸಮಾಜಸೇವಾ ಸಂಸ್ಥೆಗಳು ಅಧ್ಯಾಪಕನ ಹಿರಿತನವನ್ನು ಗೌರವಿಸಿ ಈ ಸನ್ಮಾನ ನೀಡಿದ ಬಗ್ಗೆ ಅತ್ಯಂತ ಕೃತಜ್ಞನಿರುವೆ" ಎಂದರು. ಗೌರವ ಪಾರಿತೋಷಕವೊಂದನ್ನು ಅಧ್ಯಕ್ಷರು ಶ್ರೀ| ಯು. ಎಸ್. ಕೃಷ್ಣರಾಯರಿಗೆ ನೀಡಿದರು. ಕೊನೆಯಲ್ಲಿ ರೊಟೇರಿಯನ್ ಕೆ. ಅನಂತರಾಮರಾಯರು ಧನ್ಯವಾದಗಳನ್ನರ್ಪಿಸಿದರು.

ಗೋವಾ ಫೆನ್ನಿ ಪತ್ತೆ

ಮಂಗಳೂರು ಬೋಳಾರ ನೇತ್ರಾವತಿ ನದಿಯ ಸಮೀಪ ಮೊನ್ನೆ ತಾ. 24ರಂದು ರಾತ್ರಿ ಸುಮಾರು 9-30ಗಂಟೆಗೆ ಮಂಗಳೂರಿನ ಫ್ಲಾಯಿಂಗ್ ಸ್ಕ್ವಾಡ್‌ದವರು ಸುಮಾರು 35,000 ರೂಪಾಯಿ ಮೌಲ್ಯದ 1872 ಲೀಟರ್ ಗೋವಾ ಫೆನ್ನಿ ತುಂಬಿಸಿಕೊಂಡು ಸಾಗುತ್ತಿದ್ದ ದೋಣಿಯನ್ನು ಹಿಡಿದು ಫೆನ್ನಿಯನ್ನು ವಶಪಡಿಸಿಕೊಂಡಿರುವರು. ದೋಣಿಯ ಲಿಕವ್ಹಾ ಎಸ್. ಮಾರಿಕಣ್ಣ ಎಂಬವರನ್ನು ಈ ಸಂಬಂಧ ಬಂಧಿಸಲಾಗಿದೆ.

ಮೀನುಗೊಬ್ಬರ ಕಾರ್ಖಾನೆ

ಗಂಗೊಳ್ಳಿಯಲ್ಲಿ ಮೀನುಗೊಬ್ಬರ ಕಾರ್ಖಾನೆಯೊಂದನ್ನು ಶೀಘ್ರವೇ ಸ್ಥಾಪಿಸಲಾಗುವುದೆಂದು ರಾಜ್ಯ ಉದ್ಯಮ ಸಚಿವ ಶ್ರೀ| ಎಸ್. ಎಂ. ಕೃಷ್ಣ ಅವರು ಗಂಗೊಳ್ಳಿಯಲ್ಲಿ ಮೀನುಗಾರರ ಸಹಕಾರ ಸಂಘದ ವತಿಯಿಂದ ಏರ್ಪಡಿಸಲಾದ ಯಾಂತ್ರಿಕ ದೋಣಿ ಮೀನುಗಾರರ 5ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಎಂ. ಪಿ. ಸಿ. ಸಿ. ಪ್ರಧಾನ ಕಾರ್ಯದರ್ಶಿ ಶಾಸಕ ಶ್ರೀ| ಬಿ. ಭಾಸ್ಕರ ಶೆಟ್ಟರು ವಹಿಸಿದ್ದರು.

—

PRABHAT, KANNADA WEEKLY, MANGALORE-575001
REGD. No. BG 418.

To

Printed at the Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.